ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Saturday, 21st April 1973/Vaishakha 1, 1895 S.E.

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

BUDGET ESTIMATES FOR 1973-74

Demands for Grants

Demand Nos: 6, 29, 30, 31, 31A, 30B, 32, 46, 47, 48, 50 and 50A.

(Debate Continued)

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಪಡೆದು ಒಂದು ವಿಷಯವನ್ನು ಎತ್ತುವುದಕ್ಕೆ ಇಚ್ಛೆಪಡುತ್ತೇನೆ. ಈ ದಿವಸದ ಪತ್ರಿಕೆಯಲ್ಲಿ ವರದಿಯಾಗಿರುವಂತೆ......

ಅಧ್ಯಕ್ಷರು.—ಈಗತಾನೆ ತಾವು ನೋಟೀಸ್ ಕೊಟ್ಟಿದ್ದೀರಿ. ಅದನ್ನು ಸರ್ಕಾರಕ್ಕೆ ಕಳುಹಿಸಿ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದರ ಬಗ್ಗೆ ಈ ದಿನವೇ ಹೇಳಿಕೆ ಕೊಟ್ಟರೆ ಒಳ್ಳೆಯ ದು.

ಅಧ್ಯಕ್ಷರು.—ಫುಡ್ ಮಿನಿಸ್ಟರ್ ಬಂದಿಲ್ಲ, ಮುಖ್ಯಮಂತ್ರಿಗಳು ಸಹ ಇಲ್ಲ, ಅವರುಗಳು ಬರಲಿ ಅನಂತರ ನೋಡೋಣ. ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಶಾಖೆಗಳ ಮಂತ್ರಿಗಳು).—ನಾನು ಕುಳಿತು ಮಾತನಾಡುವುದಕ್ಕೆ ಅನುಮತಿ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು.—ಆಗಬಹುದು.

Budget Estimates for 1973-74—Demands for grants Demand Nos. 6, 29, 30, 31, 31A, 30B, 32, 46, 47, 48, 50 and 50A

(Debate Continued)

†ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷಿಣಿಯವರೇ, ಕಳೆದ ಎರಡು ದಿವಸಗಳು ಈ ಲೋಕೋಪ

---

† Indicates the that remarks or speeches have not been revised by the member concerned.

(ಶ್ರೀ ಎಚ್. ಎಂ. ಚನ್ನಬಸಪ್ಪ)

ಯೋಗಿ ಇಲಾಖೆಯ ಕಾರ್ಯಕಲಾಪಗಳ ಬಗ್ಗೆ ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ರಚನಾತ್ಮಕವಾದ ಟೀಕೆ ಟಿಪ್ಪಣಿಗಳನ್ನು ಸಹ ಮಾಡಿದ್ದಾರೆ. ಈ ಎಲ್ಲ ಟೀಕೆಟಿಪ್ಪಣಿಗಳು ಮತ್ತು ಸಲಹೆಗಳು ಈ ಇಲಾಖೆಯ ಕಾರ್ಯದಕ್ಷತೆ, ಕೆಲಸಗಳು ವಿದ್ಯುತ್‌ವೇಗದಿಂದ ನಡೆದು ಜನರಿಗೆ ಅನುಕೂಲಗಳು ಬೇಗ ದೊರಕುವಂತಾಗಬೇಕು, ಈ ರಾಜ್ಯದ ದಕ್ಷತೆಯನ್ನು ಇನ್ನಷ್ಟು ಹೆಚ್ಚಿಸಬೇಕು ಅನ್ನತಕ್ಕಂಥದ್ದನ್ನು ಅಂತರಾಳದ ವಿಶ್ವಾಸದಿಂದ ಮಾಡಿದ್ದಾರೆಂದು ನಾನು ನಂಬಿದ್ದೇನೆ. ಮತ್ತು ಆ ದೃಷ್ಟಿಯಲ್ಲಿ ಎಲ್ಲ ಟೀಕೆಟಿಪ್ಪಣಿಗಳನ್ನು ಮತ್ತು ಸಲಹೆಗಳನ್ನು ನಾನು ಸ್ವಾಗತಿಸಿದ್ದೇನೆ. ಈ ಇಲಾಖೆಯ ಕೆಲಸಗಳು, ಈ ಇಲಾಖೆಗೆ ಕೊಟ್ಟಿರತಕ್ಕಂಥ ಹೆಸರು ಏನಿದೆ ಅದಕ್ಕೆ ಅನ್ವರ್ಥವಾಗಿ ಈ ಲೋಕೋಪಯೋಗಿ ಇಲಾಖೆ ಲೋಕಕ್ಕೆ ಹೆಚ್ಚು ಉಪಯುಕ್ತವಾದ ಕೆಲಸಗಳನ್ನು ನೇರವಾಗಿ ಜನರಿಗೆ ತಲುಪಿಸತಕ್ಕಂಥ ಇಲಾಖೆಯಾಗಿದೆ. ಈ ಇಲಾಖೆಗೆ ಸಂಬಂಧಪಟ್ಟಂತೆ ಈ ಕೆಳಕಂಡಭಾಗಗಳು ಇದಕ್ಕೆ ಸೇರಿವೆ :

ಆಡಳಿತ, ಸಿಬ್ಬಂದಿ, ಸಾರಿಗೆ ಸಂಪರ್ಕ ಅಂದರೆ ರಸ್ತೆಗಳು, ಕಟ್ಟಡಗಳು, ನೀರಾವರಿ ಸಣ್ಣದು ಮತ್ತು ಎತ್ತು ನೀರಾವರಿ, ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ವಿತರಣೆ, ಬಂದರುಗಳು, ಸಣ್ಣದು ಮತ್ತು ಒಳನಾಡಿನ ಜಲಮಾರ್ಗ ಸಂಪರ್ಕಗಳು ;

ಇಷ್ಟು ವಿಷಯಗಳು ಈ ಇಲಾಖೆಗೆ ನೇರವಾಗಿ ಸಂಬಂಧಪಟ್ಟಿವೆ. ಈ ಇಲಾಖೆಯ ನಡೆವಳಿಕೆ ವಿಷಯದಲ್ಲಿ, ಆಡಳಿತದ ವಿಷಯದಲ್ಲಿ ಬಹಳ ವಿಫಲವಾದ ಚರ್ಚೆಯಾಗಿದೆ. ಇದರಲ್ಲಿ ಸಾಮಾನ್ಯವಾಗಿ ಇರಬಹುದಾದಂಥ ಲೋಪದೋಷಗಳನ್ನೆಲ್ಲಾ ಮಾನ್ಯ ಸದಸ್ಯರು ಎತ್ತಿ ತೋರಿಸಿದ್ದಾರೆ. ಅದಕ್ಕೆ ನಾನು ಈ ಸಭೆಗೆ ಕೃತಜ್ಞನಾಗಿದ್ದೇನೆ. ಈ ಇಲಾಖೆ ಎಲ್ಲರೂ ತಿಳಿದಿರುವಂತೆ ಬಹಳ ದೊಡ್ಡದು. ಮತ್ತು ರಾಜ್ಯದ ಬಹುಭಾಗದ ಹಣವನ್ನು ಖರ್ಚು ಮಾಡತಕ್ಕಂಥ ಇಲಾಖೆ. ಈ ಇಲಾಖೆಯಲ್ಲಿ ಶಿಸ್ತು, ದಕ್ಷತೆ, ಪ್ರಾಮಾಣಿಕತೆ, ಸೇವಾಕಾಂಕ್ಷೆ ವಿಶೇಷವಾಗಿ ಹೆಚ್ಚಿನ ಪ್ರಮಾಣದಲ್ಲಿ ಇರುವುದು ಅವಶ್ಯಕ. ಮತ್ತು ಇದರ ಜೊತೆಗೆ ನಿಸ್ಪೃಹತೆ, ನಿರ್ದಾಕ್ಷಿಣ್ಯ ಮನೋಭಾವ ಕೆಲಸಗಾರರಲ್ಲಿ ಇರತಕ್ಕದ್ದು ಅವಶ್ಯಕ. ಇವುಗಳು ಇಲ್ಲದಿದ್ದಲ್ಲಿ ಈ ಇಲಾಖೆಯಿಂದ ಆಗಬೇಕಾದಂಥ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತವೆ. ಸರ್ಕಾರವೇ ಆಗಲಿ, ಅಧಿಕಾರಿಗಳೇ ಆಗಲಿ, ಸತ್‌ಸಂಪ್ರದಾಯಗಳಿಗೆ ವಿಧಿನಿಯಮಗಳಿಗೆ ದಾಕ್ಷಿಣ್ಯಪರರಾಗಬೇಕೇ ವಿನಃ ಅನ್ಯಥ ಕೂಡದು. ಇಷ್ಟು ಆದರ್ಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಇಲಾಖೆ ಕೆಲಸ ಮಾಡಿದರೆ ನಮ್ಮ ದೇಶದ ಭವಿಷ್ಯ ಬಹುಬೇಗ ಆಗುತ್ತದೆ. ಇದರಲ್ಲಿ ಎಲ್ಲಿ ಲೋಪದೋಷಗಳು ಬಂದರೂ ಆ ಪ್ರಮಾಣದಲ್ಲಿ ಕುಂಠಿತವಾಗುತ್ತದೆ. ಇದರ ಕಾರ್ಯನಿರ್ವಹಣೆಯನ್ನು ಕೇವಲ ಅಧಿಕಾರಿಗಳು ಮತ್ತು ಸರ್ಕಾರದಿಂದ ಮಾಡುವುದಕ್ಕೆ ಸಾಧ್ಯವೆಂದು ತಾವೇನಾದರೂ ತಿಳಿದಿದ್ದರೆ ಅದು ಭ್ರಾಂತಿ. ಸಾರ್ವಜನಿಕರ ಸಹಕಾರ, ತಮ್ಮಗಳ ಸಹಕಾರ ಮತ್ತು ಸಂಪೂರ್ಣ ಸಹಾನುಭೂತಿ, ಪ್ರೋತ್ಸಾಹ ಇವು ಇಲ್ಲದಿದ್ದಲ್ಲಿ ಯಾವ ಸರ್ಕಾರವಾದರೂ ತಾನೇ ಸಂಪೂರ್ಣ ದಕ್ಷತೆಯಿಂದ ಕೆಲಸ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಸಾರ್ವಜನಿಕರ ಸಹಕಾರ ಮತ್ತು ಈ ಸಭೆಯ ಸದಸ್ಯರ ಸಹಕಾರ ಬಹಳ ಅವಶ್ಯಕ. ಈ ಅಂಶವನ್ನು ನಾನು ಒತ್ತಿಒತ್ತಿ ತಮ್ಮಲ್ಲಿ ಅರಿಕೆ ಮಾಡುತ್ತಿದ್ದೇನೆ. ಸಾಮಾನ್ಯವಾಗಿ ಈ ಇಲಾಖೆಯ ಮೇಲೆ ಬರತಕ್ಕಂಥ ದೂರುಗಳು ಎಂದರೆ ಅಧಿಕಾರ ದುರುಪಯೋಗ. ಕಂಟ್ರಾಕ್ಟರುಗಳಿಗೆ ಹೆಚ್ಚು ಸಹಾನುಭೂತಿ ಅಂದರೆ ರೂಲ್ಸ್, ವಿಧಿನಿಯಮಗಳನ್ನು ಬಿಟ್ಟು ಸಹಾಯ ಮಾಡುವ ಮನೋವೃತ್ತಿ, ಡಿಸೈನ್ ಬದಲಾವಣೆ ಮಾಡಿ ಸಹಾಯ ಮಾಡುವುದು, ಹೆಚ್ಚುವರಿ ಅಳತೆ ಕೊಟ್ಟು ಸಹಾಯ ಮಾಡುವುದು ಮತ್ತು ಅಲ್ಲಲ್ಲಿ ಒಂದೊಂದು ಸುಳ್ಳು ಬಿಲ್ ತಯಾರು ಮಾಡಿ ಹಣವನ್ನು ಕೊಡುವುದು ಮತ್ತು ಅವರಿಗೆ ನ್ಯಾಯವಾಗಿ ಕೊಡಬೇಕಾದಂಥ ಹಣಕ್ಕಿಂತ ಹೆಚ್ಚು ಅಡ್ವಾನ್ಸ್ ಕೊಟ್ಟು ಸಹಾಯ ಮಾಡುವುದು ಮತ್ತು ಒಬ್ಬ ಕಂಟ್ರಾಕ್ಟರಿಗೂ ಇನ್ನೊಬ್ಬ ಕಂಟ್ರಾಕ್ಟರಿಗೂ ಪ್ರೇಮವಿಶ್ವಾಸಗಳಿಂದ ತಾರತಮ್ಯ ಮಾಡುವುದು, ಕೆಲಸಕಾರ್ಯಗಳನ್ನು ಅನಾವಶ್ಯಕವಾಗಿ ಮುಂದುವರೆಸುವುದು ಅಂದರೆ ನಿಧಾನ ಮಾಡುವುದು ಇವೇ ಸಾಮಾನ್ಯವಾಗಿ ಈ ಇಲಾಖೆಯ ಮೇಲೆ ಬರತಕ್ಕಂಥ ದೂರುಗಳು. ಈ ದೂರುಗಳ ಪೈಕಿ ಹಲವು ದೂರುಗಳಲ್ಲಿ ಸತ್ಯಾಂಶವಿರುತ್ತದೆ.

ಹಲವು ದೂರುಗಳು ನಾನಾಕಾರಣಗಳಿಂದ ಅಸತ್ಯದಿಂದ ಕೂಡಿರುತ್ತವೆ. ದೋಷಪೂರಿತವಾಗಿರುತ್ತವೆ. ಆದರೆ ಸರ್ಕಾರ ಮಾತ್ರ ಬರತಕ್ಕ ದೂರುಗಳನ್ನು ವಿಮರ್ಶೆ ಮಾಡಿ ಸತ್ಯಕ್ಕೆ ದೂರ ಇದ್ದನ್ನು ಬಿಟ್ಟು ಸತ್ಯವಾಗಿರತಕ್ಕವುಗಳನ್ನು ಪರಿಶೀಲನೆ ಮಾಡಿ ತಪ್ಪಿತಸ್ಥರಿಗೆ, ಅಪ್ರಮಾಣಿಕರಿಗೆ ಅದಕ್ಷರಿಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಪ್ರಥಮ ಕರ್ತವ್ಯ ಎಂದು ನಾನು ತಿಳಿದುಕೊಂಡಿ

ದ್ದೇನೆ. ಹೀಗೆ ಮಾಡುವಾಗ ಸತ್ಯದಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡತಕ್ಕವರಿಗೆ ಪ್ರೋತ್ಸಾಹವನ್ನು ಕೊಡಬೇಕಾದ್ದು ಬಹಳ ಅವಶ್ಯಕ. ಇವುಗಳನ್ನು ವಿಚಾರಣೆ ನಡೆಸುವಾಗ ಪ್ರಾಮಾಣಿಕರಾಗಿರತಕ್ಕವರಿಗೆ ಅವರ ಮೇಲೆ ಏನಾದರೂ ಶಿಕ್ಷೆ ವಿಧಿಸಿದರೆ ಅದರಿಂದ ಇಡೀ ಆಡಳಿತ ದಕ್ಷತೆಗೆ ಧಕ್ಕೆ ಬರುತ್ತದೆ ಎನ್ನತಕ್ಕಂಥಾದ್ದನ್ನು ನಾವು ನೀವು ಎಲ್ಲರೂ ಒಪ್ಪತಕ್ಕ ಮಾತು. ಆದ್ದರಿಂದ ಶಿಕ್ಷೆಗಳನ್ನು ವಿಧಿಸುವಾಗ ಸಾಧ್ಯವಾದಷ್ಟು ಪ್ರಯತ್ನ ಮಾಡಿ ಪ್ರಾಮಾಣಿಕರಾದವರಿಗೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕಂಥಾದ್ದು ಮುಖ್ಯ. ಅಪ್ರಾಮಾಣಿಕರಾದವರಿಗೆ ಶಿಕ್ಷೆಯನ್ನು ಮಾಡುವುದು ಎಷ್ಟು ಪ್ರಾಮುಖ್ಯವೋ ಅದಕ್ಕಿಂತ ಹೆಚ್ಚಿನ ಪ್ರಾಮುಖ್ಯ ಪ್ರಾಮಾಣಿಕರಾದವರಿಗೆ, ದಕ್ಷರಾದವರಿಗೆ ಅದರಿಂದ ನೋವು ಆಗಬಾರದು. ಇದರ ಬಗ್ಗೆ ಸರ್ಕಾರ ಬಹಳ ತೀವ್ರ ಆಶೆಯುಳ್ಳವರಾಗಿದ್ದಾರೆ. ದಕ್ಷತೆಗೆ ಕುಂದು ಬರುವಂತೆ ವರ್ತಿಸತಕ್ಕ ಅಧಿಕಾರಿಗಳ ವಿಷಯದಲ್ಲಿ ವಿಚಾರ ಮಾಡಿ ನಮಗೆ ಸಲಹೆ ಮಾಡತಕ್ಕ ಮೆಷಿನರಿ ವಿಜಿಲೆನ್ಸ್ ಕಮಿಷನ್. ಅದಕ್ಕೆ ಸಹಾಯಕವಾಗಿ ಟೆಕ್ನಿಕಲ್ ಆಡಿಟ್ ಸೆಲ್ ಇದೆ. ಅದು ಬಿಟ್ಟರೆ ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ. ಇಲಾಖೆಯಿಂದ ವಿಚಾರ ಮಾಡಿಸುವುದು. ಅದು ಬಿಟ್ಟರೆ ನಮ್ಮ ಮೈಸೂರು ಸಿವಿಲ್ ಸರ್ವೀಸ್ ಕೋಡು 285ನೇ ಕಲಂ ಪ್ರಕಾರ ಅದಕ್ಷರನ್ನು, ಮತ್ತು ಅಪ್ರಾಮಾಣಿಕರಾದವರನ್ನು ಸರ್ವೀಸಿನಿಂದ ನಿವೃತ್ತಿ ಮಾಡತಕ್ಕದ್ದು. ಇವು ಮೂರು ಮಾರ್ಗಗಳು ಇವೆ. ಇದರಲ್ಲಿ ವಿಜಿಲೆನ್ಸ್ ಕಮಿಷನ್ ವಿಚಾರಣೆ ಮಾಡತಕ್ಕ ಕ್ರಮಗಳು ಇವೆ ಅವು ಬಹಳ ನಿಧಾನವಾದ ಕ್ರಮ ಎಂದು ನನ್ನ ಅನುಭವದಲ್ಲಿ ಬಂದಿದೆ. ಇದರಲ್ಲಿ ಒಂದು ವೇಳೆ ಸತ್ಯ ಮುಚ್ಚಿಹೋಗತಕ್ಕಂಥಾ ಅವಕಾಶವೂ ಸಿಕ್ಕುತ್ತದೆ. ಓವರ್ ಮೆಜರ್‌ಮೆಂಟ್ಸ್ ಮತ್ತು ಫಾಲ್ಸ್ ಬಿಲ್ಲುಗಳ ಆಪಾದನೆಗಳು ಬಂದಾಗ ಅವುಗಳನ್ನು ಪರೀಕ್ಷೆ ಮಾಡುವುದರಲ್ಲಿ ಅವುಗಳು ಮುಚ್ಚಿಹೋಗಿರುತ್ತವೆ. ಮತ್ತು ವಿಚಾರಣೆ ನಡೆಸುವುದರಲ್ಲಿ ಶಿಕ್ಷೆ ಕೊಡಬೇಕಾದಂತಹವರಿಗೆ ಶಿಕ್ಷೆ ಸಿಕ್ಕುವುದಿಲ್ಲ. ಆ ವೇಳೆಗೆ ಅವರು ಸತ್ತುಹೋಗಿರುತ್ತಾರೆ. ಈ ವಿಚಾರಣೆ ಮುಗಿಯುವುದರಲ್ಲಿ ಆಫೀಸರು ನಿವೃತ್ತರಾಗಿರುತ್ತಾರೆ. ಇದು ನನ್ನ ಗಮನಕ್ಕೆ ಬಂದಿರುವುದು ಉಂಟು. ಆದ್ದರಿಂದ ವಿಚಾರಣಾ ಕ್ರಮವನ್ನು ತೀವ್ರಗತಿಯಿಂದ ಮಾರ್ಪಾಡು ಮಾಡಬೇಕು ಎನ್ನುವುದರ ಬಗ್ಗೆ ವಿಚಾರ ಮಾಡಬೇಕು. ಇದು ನನಗೆ ಇರತಕ್ಕ ತೊಂದರೆಗಳು. ತಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ವಿಚಾರಗಳನ್ನು ನಾನು ತಮಗೆ ತಿಳಿಸಿದೆ. ಈ ಪ್ರೊಸೀಜರುಗಳನ್ನು ಮಾರ್ಪಾಡು ಮಾಡುವುದರ ಬಗ್ಗೆ ತೀವ್ರತೆಯಿಂದ ಸರ್ಕಾರ ಆಲೋಚನೆ ಮಾಡುತ್ತಿದೆ. ಶ್ರೀಮಾನ್ ದೇವೇಗೌಡರು ಟೆಕ್ನಿಕಲ್ ಆಡಿಟ್ ಸೆಲ್ಲಿಗೆ ಒಬ್ಬರು ಚೀಫ್ ಇಂಜಿನಿಯರ್ ದರ್ಜೆಯ ಅಧಿಕಾರಿಗಳು ಇರುವುದು ಉತ್ತಮ ; ಒಂದು ವೇಳೆ ಸೂಪರಿನ್‌ಟೆಂಡೆಂಟ್ ಇಂಜಿನಿಯರು ಇದ್ದರೆ ಅವರು ಚೀಫ್ ಇಂಜಿನಿಯರ್ ಮಾಡಿದ ತಪ್ಪಿನ ಬಗ್ಗೆ ಅಭಿಪ್ರಾಯ ಕೊಡತಕ್ಕದ್ದು ಕಷ್ಟವಾಗಬಹುದು ಎಂದು ಹೇಳಿದರು. ಇದರಲ್ಲಿ ಸ್ವಲ್ಪ ಸತ್ಯಾಂಶ ಇದೆ. ಇದು ವಿಚಾರಕ್ಕೆ ಯೋಗ್ಯವಾದ ವಿಷಯ ಇಷ್ಟು ಮಾತ್ರ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ಒಂದು ಬಹಳ ಶೀಘ್ರವಾಗಿ ಕ್ರಮ ತೆಗೆದುಕೊಳ್ಳತಕ್ಕ ಅಸ್ತ್ರ ಎಂದರೆ ಮೈಸೂರು ಸಿವಿಲ್ ಸರ್ವೀಸ್ ಕೋಡಿನ 285ನೇ ಕಲಂ ಪ್ರಕಾರ ಯಾರು ಯಾರು ಅದಕ್ಷರು, ಅಪ್ರಾಮಾಣಿಕರು, ನಿರುಪಯೋಗಿಗಳು ಆಗಿದ್ದಾರೆ ಎಂದು ಕಂಡುಬರುತ್ತದೆ ಅಂಥವರಿಗೆ 50 ವರ್ಷ ವಯಸ್ಸು ಮತ್ತು 25 ವರ್ಷ ಸರ್ವೀಸ್ ಆಗಿರತಕ್ಕವರನ್ನು ಪಟ್ಟಿ ಮಾಡಿ ಇದರಲ್ಲಿ ಯಾವ ಯಾವ ಅಧಿಕಾರಿಗಳು ಅನುಮಾನಕ್ಕೆ ಎಡೆಕೊಟ್ಟು ಕಣ್ಣಿಗೆ ಕಾಣುತ್ತಾರೆ ಅಂಥವರಿಗೆ ಸರ್ಕಾರ ಸಂಬಳ ಕೊಟ್ಟುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಅಂಥವರನ್ನು ಬರ್ತರಫ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಆದ್ದರಿಂದ ಸರ್ಕಾರ ಈ ಸಿವಿಲ್ ಸರ್ವೀಸ್ ಕೋಡಿನ 285ನೇ ಕಲಂ ಅನ್ನು ಉಪಯೋಗ ಮಾಡಿಕೊಂಡು ಇಲಾಖೆಯಲ್ಲಿ ಇರತಕ್ಕ ಅದಕ್ಷರು ಮತ್ತು ಅಪ್ರಾಮಾಣಿಕರು ಹಾಗೂ ನಿರುಪಯೋಗಿಗಳು ಎಷ್ಟು ಜನ ಇದ್ದಾರೆ ಅಷ್ಟು ಜನರನ್ನೂ ನಿರ್ದಾಕ್ಷಿಣ್ಯವಾಗಿ ಬರ್ತರಫ್ ಮಾಡಬೇಕೆಂದು ಸರ್ಕಾರ ನಿರ್ಧರಿಸಿದೆ ಎಂದು ನಾನು ಸ್ಪಷ್ಟವಾಗಿ ತಿಳಿಸುತ್ತಿದ್ದೇನೆ. ಮತ್ತೆ ಅಪಾದನೆಗಳನ್ನು ಮಾಡುವಾಗ ಸ್ವಲ್ಪಮಟ್ಟಿಗೆ ಪ್ರಥಮ ನೋಟದಲ್ಲಿ ಕಾಣತಕ್ಕ ತಪ್ಪುಗಳು ಕಂಡುಬಂದಂಥಾದ್ದನ್ನು ಶೀಘ್ರದಲ್ಲಿ ವಿಚಾರಣೆಗೆ ಗುರಿಪಡಿಸಿ ಶಿಕ್ಷೆ ಮಾಡತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದ ಆಶೆಯಾಗಿದೆ. ಅದಕ್ಕೆ ಯಾವ ರೀತಿ ಮಾರ್ಪಾಡುಗಳನ್ನು ಮಾಡಬೇಕು ಎನ್ನುವುದನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಿ ಶೀಘ್ರದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದು ಸರ್ಕಾರದ ಆಶೆಯಾಗಿದೆ.

ಇನ್ನೊಂದು ವಿಷಯವೇನೆಂದರೆ ಅಧಿಕಾರಿಗಳು ತಮ್ಮ ಶಕ್ತಿಮೀರಿ ಹೆಚ್ಚು ಸಂಪತ್ತು ಮಾಡಿಕೊಳ್ಳುತ್ತಿದ್ದಾರೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಯಾರು ಆಸ್ತಿಪಾಸ್ತಿಗಳನ್ನು ಮಾಡಿಕೊಳ್ಳುತ್ತಿದ್ದಾರೆಯೋ ಅಂಥಾ ಅಧಿಕಾರಿಗಳ ಮೇಲೆ ಉಗ್ರಕ್ರಮ ತೆಗೆದುಕೊಳ್ಳತಕ್ಕದ್ದು

(ಶ್ರೀ ಎಚ್. ಎಂ. ಚನ್ನಬಸಪ್ಪ)

ಸುಲಭ. ಅದರಲ್ಲಿ ಒಂದು ಕಷ್ಟ ಏನೆಂದರೆ ಸಾವಿರಾರು ಅಧಿಕಾರಿಗಳು ಪ್ರತಿವರ್ಷ ಆಸ್ತಿಪಾಸ್ತಿಗಳ ಪಟ್ಟಿಯನ್ನು ಸರ್ಕಾರಕ್ಕೆ ಕೊಟ್ಟಿದ್ದು ಸರ್ಕಾರದ ವಶದಲ್ಲಿ ಇದೆ. ಆ ಅಧಿಕಾರಿಗಳು ಕೊಟ್ಟಿರತಕ್ಕ ಆಸ್ತಿಪಾಸ್ತಿಗಳ ವಿವರ ಸರಿಯಾಗಿದೆಯೋ ಅಥವಾ ಇಲ್ಲವೇ ಎನ್ನತಕ್ಕಂಥಾ ವಿಷಯಗಳೆಲ್ಲವನ್ನೂ ವಿಚಾರಣೆ ಮಾಡಬೇಕಾದರೆ ಅದಕ್ಕೆ ಒಂದು ಸಿಬ್ಬಂದಿಯನ್ನು ಇಟ್ಟುಕೊಂಡು ಮಾಡಬೇಕಾಗುತ್ತದೆ. ಯಾರು ಯಾರು ಸುಳ್ಳು ಲೆಕ್ಕವನ್ನು ಕೊಟ್ಟಿದ್ದಾರೆ, ಯಾರು ಯಾರು ಆಸ್ತಿಯ ಸುಳ್ಳುಲೆಕ್ಕವನ್ನು ಕೊಟ್ಟಿದ್ದಾರೆ. ಯಾರು ತಮ್ಮ ಆಸ್ತಿಯ ಬಗ್ಗೆ ಕಡಿಮೆ ಬೆಲೆಯನ್ನು ಕೊಟ್ಟಿದ್ದಾರೆ ಎಂಬುದನ್ನು ವಿಚಾರಣೆ ಮಾಡಬೇಕಾದರೆ ಒಂದು ವಿಜಿಲೆನ್ಸ್ ಕಮೀಷನ್ ಅಲ್ಲ 10 ವಿಜಿಲೆನ್ಸ್ ಮಾಡಿದರೂ ಕಷ್ಟವಾಗುತ್ತದೆ.

Sri M. S. KRISHNAN.—You yourself admitted that it should be wound up·

Sri H. M. CHANNABASAPPA.—I did not say that. What I said was the procedure prescribed fer dealing with cases by the Vigilance Commission requires to be changed or amended. ವಿಜಿಲೆನ್ಸ್ ಕಮಿಷನ್ನಿನ ಬಗ್ಗೆ ನಾನು ಅಪಾದನೆ ಮಾಡುತ್ತಿಲ್ಲ. ಅವರ ಪ್ರೊಸೀಜರ್ ಏನಿದೆ ಅವುಗಳು ತೀವ್ರವಾಗಿ ಆಗುವುದಕ್ಕೆ ಸಹಾಯಕವಾಗುವಂತೆ ಅವುಳಗನ್ನು ಮಾರ್ಪಾಡು ಮಾಡಬೇಕು ಎಂದು ನಾನು ಹೇಳಿದೆ.

Sri C. M. ARUMUGHAM.—I rise to a point of order. When an Hon.Minister is sitting and speaking how could we know whether he is yielding or not ?

MADAM SPEAKER.—The Hon. Minister is repeatedly saying that he is not yielding. There is no point of order in what the hon. member says.

Sri C. M. ARUMUGHAM.—Then secondly, I want to know whether an Hon. Minister could make distorted and contradictory statement in the House ?

MADAM SPEAKER.—I don t see much contradiction there. The hon. member will hear the Hon. Minister in full.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಅರ್ಮುಗಂರವರು ನಾನು ಕಾಂಟ್ರಡಿಕ್ಟರಿ ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ. ಅದು ನನ್ನಲ್ಲಿ ಬರುವುದು ಅಸ್ವಾಭಾವಿಕ. ಅವರಿಗೆ ಏನೊಂದು ಸರ್ಕಾರ ಪ್ರೊಸೀಜರ್ ಪ್ರಿಸ್ಕ್ರೈಬ್ ಮಾಡಿದೆ. ಆ ಪ್ರೊಸೀಜರನ್ನು ಅನುಸರಿಸಲೇಬೇಕು. ಅದನ್ನು ಅನುಸರಿಸುವುದರಿಂದ ಸ್ವಲ್ಪ ಡಿಲೆಯಾಗುತ್ತಿದೆ. ಆದ್ದರಿಂದ ಈ ಪ್ರೊಸೀಜರ್ ಸಿಂಪ್ಲಿಫೈ ಮಾಡಿ ನ್ಯಾಯ ದೊರಕಿಸಿಕೊಡುವ ಬಗ್ಗೆ ಸರ್ಕಾರ ತೀವ್ರವಾಗಿ ಆಲೋಚನೆ ಮಾಡುತ್ತದೆ ಎಂದು ಹೇಳಿದ್ದೇನೆಯೇ ವಿನಹ ವಿಜಿಲೆನ್ಸ್ ಕಮಿಷನ್ ಇರಬಾರದು ಎಂದು ಹೇಳಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಸ್ವಲ್ಪ ತಾವು ಅದನ್ನು ಬದಲಾವಣೆ ಮಾಡಿಕೊಳ್ಳುತ್ತಿದ್ದೀರಿ.

Sri H. M. CHANNABASAPPA.—I am not so much upset as to make any contradictory statements in this August House : nor I make any contradictory statements elsewhere. ಸಾಮಾನ್ಯವಾಗಿ ಇಂಡಿಸಿಪ್ಲಿನ್, ಕರಪ್ಷನ್ ಇವುಗಳೆಲ್ಲವನ್ನೂ ಕಡಿಮೆ ಮಾಡಬೇಕಾದರೆ ಆಯಾ ಇಲಾಖೆಯ ಮೇಲ್ಪಟ್ಟ ಅಧಿಕಾರಿಗಳು ಒಂದು ಸರಿಯಾದ ಕಂಟ್ರೋಲನ್ನು ಇಟ್ಟುಕೊಂಡರೆ ಇವೆಲ್ಲವನ್ನೂ ಕಡಿಮೆ ಮಾಡಬಹುದು. ಜೂನಿಯರ್ ಇಂಜನಿಯರ್, ಅಸಿಸ್ಟಾಂಟ್ ಇಂಜಿನಿಯರುಗಳ ಮೇಲೆ ಎಕ್ಸಿಕ್ಯೂಟಿವ್ ಇಂಜಿನಿಯರು, ಎಗ್ಸಿಕ್ಯೂಟಿವ್ ಇಂಜಿನಿಯರ ಮೇಲೆ ಸುಪರಿಂಟೆಂಡಿಂಗ್ ಇಂಜಿನಿಯರು ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ ಮೇಲೆ ಚೀಫ್ ಇಂಜಿನಿಯರ್, ಅವರವರ ಮಟ್ಟದಲ್ಲಿ ಅವರವರ

ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿ, ತಮ್ಮ ತಮ್ಮ ಅಧಿಕಾರವನ್ನು ಯೋಗ್ಯವಾಗಿ ಚಲಾಯಿಸಿದರೆ ಇಂಥ ವಿಚಾರಗಳು ಚಹುತೇಕ ಕಡಿಮೆಯಾಗುತ್ತದೆ. ಇವತ್ತು ಮೇಲ್ಪಟ್ಟ ಅಧಿಕಾರಿಗಳು ಇದರ ಬಗ್ಗೆ ಪ್ರಾಮುಖ್ಯತೆ ಕೊಡದೆ ಇರುವುದರಿಂದ ಇವೆಲ್ಲವೂ ವಿಶೇಷವಾಗಿ ವಿನಹ ಇಲ್ಲದಿದ್ದರೆ ಆಗುತ್ತಾ ಇರಲಿಲ್ಲ. ಇಲಾಖೆಯ ಮುಖ್ಯ ಅಧಿಕಾರಿಗಳಿಗೆ ಹೆಚ್ಚು ಸಂಬಳ ಸಾರಿಗೆಗಳನ್ನು ಕೊಡುವುದರ ಮೂಲ ಉದ್ದೇಶವಾದರೂ ಏನು ? ಇವರು ತಾಂತ್ರಿಕವಾಗಿ ನೋಡುವುದಲ್ಲದೆ ಆಡಳಿತದ ನಿಷ್ಠುರತೆಯ ದೃಷ್ಟಿಯಿಂದ, ನಿರ್ದಾಕ್ಷಿಣ್ಯದಿಂದ ನ್ಯಾಯ ನೀತಿಗಳನ್ನು ಪಾಲನೆ ಮಾಡಿಕೊಳ್ಳದಿದ್ದರೆ ಏನು ಮಾಡುವುದು ? ಇದರಿಂದ ಮುಂದಾದರೂ ಈ ರೀತಿ ಕೆಳಗಿನವರು ಮಾಡಿದ ತಪ್ಪಿಗೆ ಮೇಲ್ಪಟ್ಟ ಅಧಿಕಾರಿಗಳಿಗೆ ಶಿಕ್ಷೆ ಕೊಡುವ ಕಾಲ ಬಂದೀತು ಎಂದು ನಾನು ಎಚ್ಚರಿಕೆಯನ್ನು ಕೊಡುತ್ತೇನೆ.

ಇನ್ನು ಕೆಲವು ಕಾರ್ಯಗಳು ಬಹಳ ನಿಧಾನವಾಗಿ ನಡೆಯುತ್ತಿದೆ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರು ಬಹಳ ತೀವ್ರವಾದಂತಹ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಹಲವು ವೇಳೆ ಬಹಳ ವಿದ್ಯುತ್ ವೇಗದಲ್ಲಿ ಕಾರ್ಯಗಳು ನಡೆದಿದ್ದೂ ಉಂಟು. ಹಲವು ವೇಳೆ ನಾನಾ ಕಾರಣಗಳಿಂದ ನಿಧಾನವಾದುದೂ ಉಂಟು. ಇವುಗಳಲ್ಲಿ ಯಾವ್ಯಾವ ಕಾರ್ಯಗಳು ನಿಧಾನವಾಗುತ್ತಿವೆ ಎಂಬುದನ್ನು ಕಂಡುಹಿಡಿದು ಸರಿಪಡಿಸತಕ್ಕದ್ದು ಬಹಳ ಮುಖ್ಯ. ಡಿಲೇ ಆಗುವುದಕ್ಕೆ ಹಲವು ಕಾರಣಗಳು ಇವೆ. ಮೊದಲನೆಯದು ಭೂಮಿ ಕೆಲಸಕಾರ್ಯಗಳಿಗೆ ಸಿಗದೆ ಇರುವುದು, ಎರಡನೆಯದು ಏಜೆನ್ಸಿ ಫಿಕ್ಸ್ ಮಾಡತಕ್ಕದ್ದು, ಮೂರನೆಯದು ಕಾರ್ಯವನ್ನು ಶುರು ಮಾಡಿದ ಕಾಲದಲ್ಲಿ ಭೂಗರ್ಭದಲ್ಲಿರತಕ್ಕ ಫೌಂಡೇಶನ್ ಹೆಚ್ಚು ಕಮ್ಮಿಯಾದರೆ ಡಿಲೇಯಾಗುತ್ತಿರುವುದು, ನಾಲ್ಕನೆಯದು ಡಿಸ್ಪೈನ್ಸ್ ಬಗ್ಗೆ ಬದಲಾವಣೆಯಾಗಿ ಇಲಾಖೆಯವರಿಗೂ ಕಂಟ್ರಾಕ್ಟರಿಗೂ ಆಗತಕ್ಕಂತಹ ತಕರಾರುಗಳು. ಇವುಗಳಿಂದ ನಿಧಾನವಾಗುತ್ತಿದೆ. ಇವುಗಳ ಬಗ್ಗೆ ಭೂಮಿಯನ್ನು ತಕ್ಷಣ ಒದಗಿಸುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕೆಂದು ಸರ್ಕಾರ ಈಗಾಗಲೇ ತೀವ್ರವಾಗಿ ಗಮನ ಕೊಡುತ್ತಾ ಇದೆ. ತಮಗೆ ಮೊನ್ನೆ ಹೇಳಿದಂತೆ ಸ್ಕೇರ್ಸಿಟಿ ಕಂಡೀಶನ್ ತರತಕ್ಕ ಏರಿಯಾದಲ್ಲಿ ಶೇಕಡಾ 15 ಪರ್ಸೆಂಟ್ ತಕ್ಷಣ ಕೊಟ್ಟು ಭೂಮಿಯನ್ನು ಸ್ವಾಧೀನ ಪಡಿಸಬೇಕೆಂದು ಮಾಡಿದ್ದೇವೆ. ಅದೇ ರೀತಿಯಲ್ಲಿ ಇತರ ಕಡೆಗಳಲ್ಲಿ ಸಹ ಏಕೆ ಮಾಡಬಾರದು ಎಂಬುದರ ಬಗ್ಗೆ ಸರ್ಕಾರ ತೀವ್ರವಾದ ಗಮನ ಹರಿಸಿ, ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತದೆ ಎಂದು ತಮಗೆ ಅರಿಕೆ ಮಾಡಿಕೊಳ್ಳುತ್ತೇನೆ.

9-30 A. M.

ಮತ್ತೆ ಇನ್ನೂ ಇತರೇ ವಿಷಯಗಳಲ್ಲಿ ಹಾಗೂ ಡಿಸ್ಪೈನ್ಸ್ ವಿಷಯದಲ್ಲಿ ಮಾನ್ಯ ಶ್ರೀ ದೇವೇಗೌಡರು ಪ್ರಸ್ತಾಪ ಮಾಡಿ ಇನ್‌ವೆಸ್ಟಿಗೇಷನ್ ಮಾಡುವುದರಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು, ಅಂಥಾದ್ದಕ್ಕೆ ಬೇರೆ ವ್ಯವಸ್ಥೆ ಮಾಡಬೇಕೆಂದು ಹೇಳಿದರು. ಈಗ ಇರತಕ್ಕ ವ್ಯವಸ್ಥೆಯನ್ನು ಸ್ವಲ್ಪ ಮಟ್ಟಿಗೆ ಇಂಪ್ರೂವ್ ಮಾಡಿ ಇನ್ನು ಮುಂದೆ ಇನ್ವೆಸ್ಟಿಗೇಷನ್ನಿನಲ್ಲಿ ಏನಾದರೂ ತಪ್ಪು ಆಗಿದ್ದರೆ, ಯಾರು ಆ ಕಾರ್ಯವನ್ನು ಮಾಡುತ್ತಿದ್ದಾರೋ ಅವರೇ ಅದಕ್ಕೆ ಉತ್ತರ ಕೊಡುವುದರ ಪರಿಸ್ಥಿತಿ ಬರಬೇಕು ಆ ರೀತಿಯಾಗಿ ವ್ಯವಸ್ಥೆ ಮಾಡಿಕೊಂಡರೂ ಆ ಸಲಹೆಯನ್ನು ನಾನು ಒಪ್ಪುತ್ತೇನೆ. ಅದೊಂದು ಉಪಯುಕ್ತವಾದ ವಿಚಾರ ಮಾಡಬಹುದೆಂಬುದನ್ನು ವಿಮರ್ಶೆ ಮಾಡುತ್ತೇನೆ, ಒಟ್ಟಿನಲ್ಲಿ ಯಾರೇ ತಪ್ಪು ಮಾಡಲಿ, ಯಾರೇ ಹಾದಿ ತಪ್ಪಿ ಹೋಗಲಿ, ಆ ಹೊಣೆಗಾರಿಕೆಯನ್ನು ಸರ್ಕಾರ ಒಪ್ಪಬೇಕೆಂಬ ವಿಷಯದಲ್ಲಿ ನಾನು ನಿರ್ವಿವಾದ ಅಭಿಪ್ರಾಯಕ್ಕೆ ಬಂದಿದ್ದೇನೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ನಮ್ಮದು. ಅದನ್ನು ವ್ಯವಸ್ಥೆ ಮಾಡುವುದೂ ಸಹ ನಮ್ಮದು. ನಾನು ಆ ಹೊಣೆಯನ್ನು ಅವರ ಮೇಲೆ ಹೊರಿಸುತ್ತೇನೆ. ಇದೇ ಸಂದರ್ಭದಲ್ಲಿ ಕಾರ್ಯಗಳು ಸುಸೂತ್ರವಾಗಿ ಶೀಘ್ರದಲ್ಲಿ ನಡೆಯುವುದಕ್ಕೆ ಚೀಫ್ ಇಂಜಿನಿಯರುಗಳ ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರುಗಳ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವ ವಿಚಾರವೂ ಇದೆ. ಅದನ್ನೂ ಕೂಡ ಸರ್ಕಾರ ಯೋಚನೆಮಾಡಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕೆಂದು ಸರ್ಕಾರ ತೀವ್ರ ಅಭಿಲಾಷೆ ಪಡೆದಿದೆಯೆಂದು ನಾನು ಅರಿಕೆ ಮಾಡುತ್ತೇನೆ. ನಮ್ಮ ಇಲಾಖೆಯಲ್ಲಿ ವಾಹನಗಳು, ಮೆಷಿನರಿಗಳು ಬಹಳವಾಗಿವೆ. ನಾನಾ ತರಹ ಮೆಷಿನರಿಗಳು ಇವೆ ಅವುಗಳ ಮೇಂಟೆನೆನ್ಸ್ ರಿಪೇರಿ, ಮತ್ತು ಅವುಗಳಿಂದ ಈ ದೇಶಕ್ಕೆ ಎಷ್ಟರಮಟ್ಟಿಗೆ ಪ್ರಯೋಜನ ಉಂಟುಮಾಡಬೇಕೆಂಬ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಮತ್ತು ಚೇರ್‌ಮನ್ ಅವರು ರಿಪೋರ್ಟ್ ಮಾಡಿದ್ದಾರೆ. ಸಲಹೆ ಮಾಡಿದ್ದಾರೆ. ಅದನ್ನು ನಾನು ಓದಿದ್ದೇನೆ. ಅದರ ಬಗ್ಗೆ ರಚನಾತ್ಮಕವಾದ ವ್ಯವಸ್ಥೆಯಾಗಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಅದನ್ನು ಹೇಗೆ

(SRI H. M. CHANNABASAPPA)

ಮಾಡಬೇಕೆಂಬ ಬಗ್ಗೆ ತಜ್ಞರೆಲ್ಲರಿಂದಲೂ ವಿಚಾರ ಮಾಡಿಸಿ ತಮ್ಮೆಲ್ಲರ ಸಲಹೆಗಳನ್ನು ತೆಗೆದುಕೊಂಡು ಆ ವಿಷಯಗಳನ್ನು ಪರ್ಯಾಲೋಚನೆ ಮಾಡುತ್ತೇನೆಂದು ಸ್ಪಷ್ಟವಾಗಿ ಭರವಸೆ ಕೊಡುತ್ತೇನೆ. ಮತ್ತೊಂದು ವಿಷಯ. ಅದು ಅಧಿಕಾರಿಗಳ ವರ್ಗಾವಣೆ ವಿಷಯ. ಆ ವಿಷಯದಲ್ಲಿ ತಾವು ಏನು ಅಭಿಪ್ರಾಯವನ್ನುಳ್ಳವರಾಗಿದ್ದೀರೋ ಅದೇ ಅಭಿಪ್ರಾಯವನ್ನು ನಾನೂ ಹೊಂದಿದ್ದೇನೆ. ಸಾಧಾರಣವಾಗಿ ಪಿ.ಡಬ್ಲ್ಯು.ಡಿ. ಒಬ್ಬ ಅಧಿಕಾರಿಯನ್ನು 3-4 ವರ್ಷಗಳಿಗಿಂತ ಕಡಿಮೆ ಸರ್ವಿಸ್ ಆಗಿದ್ದು ತಕ್ಷಣದಲ್ಲಿಯೇ ವರ್ಗ ಮಾಡುವುದರಿಂದ ದೇಶಕ್ಕೆ ನಷ್ಟವೇ ವಿನಹ ಅವರಿಗೆ ನಷ್ಟವಿಲ್ಲ. ಕಾರಣ ಒಬ್ಬ ಅಧಿಕಾರಿ ಸಾಮಾನ್ಯವಾಗಿ ಅಲ್ಲಿಯ ವಿಷಯಗಳನ್ನು ತಿಳಿದುಕೊಂಡು ಕೆಲಸ ಪ್ರಾರಂಭ ಮಾಡುವುದಕ್ಕೆ ಆರು ತಿಂಗಳಾದರೂ ಬೇಕು. ಯಾವ್ಯಾವ ಕೆಲಸಗಳ ಯೋಗ್ಯತೆ ಹೇಗೆ ಇದೆ, ಯಾವ್ಯಾವ ತರಹ ಕೆಲಸಗಳು ಇವೆ, ಇವೆಲ್ಲವನ್ನೂ ಸಾಮಾನ್ಯವಾಗಿ ಮೂರು ತಿಂಗಳವರೆಗೂ ಸ್ಟಡಿ ಮಾಡಿದ ಮೇಲೆಯೇ ಆ ಕೆಲಸಗಳು ವೇಗದಿಂದ ನಡೆಯಬೇಕು. ಅಂದಮೇಲೆ ಇಂತಹ ಒಂದು ಕಾಲದಲ್ಲಿ ವರ್ಗಾವಣೆ ಮಾಡುವುದರಿಂದ ಪುನಃ ಇನ್ನೊಬ್ಬ ಬಂದು ಅದೇ ಕೆಲಸವನ್ನು ಶುರು ಮಾಡುವುದಾದರೆ, ಅದರಿಂದ ಅನೇಕ ರೀತಿಯಲ್ಲಿ ಆ ಕೆಲಸಕ್ಕೆ ಕುಂದುಂಟಾಗುತ್ತದೆ, ತತ್ವಶಃ ಈ ವಿಚಾರವನ್ನು ನಾವು ಒಪ್ಪಬೇಕಾಗುತ್ತದೆ. ಆಡಳಿತ ದೃಷ್ಟಿಯಿಂದ ಮಹತ್ವವಾದ ವಿಶೇಷ ಕಾರಣಗಳಿಗೋಸ್ಕರವಾಗಿ ಅವರನ್ನು ಬದಲಾವಣೆ ಮಾಡುವ ಸಂದರ್ಭವೂ ಬರುತ್ತದೆ. ಇದರಲ್ಲಿ ಕಟ್ಟುನಿಟ್ಟಾಗಿ ರೂಲ್ಸ್ ಬದಲಾಯಿಸಬೇಕೆಂಬ ಇಚ್ಛೆಯೂ ಈ ಸರ್ಕಾರಕ್ಕೆ ಇದೆಯೆಂಬುದನ್ನು ಇವತ್ತು ನಾವು ಸಷ್ಟಪಡಿಸುತ್ತೇನೆ. ಅದರಲ್ಲಿ ತಮ್ಮೆಲ್ಲರ ಸಹಕಾರ ಹೆಚ್ಚಿಗೆ ಇರಬೇಕೆಂದು ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅಧಿಕಾರಿಗಳ ಮೇಲೆ ಏನಾದರೂ ದೋಷಾರೋಪಣೆ, ನ್ಯೂನತೆ ಇದ್ದರೆ, ಅವುಗಳ ಬಗ್ಗೆ ಯಾವತ್ತು ಬೇಕಾದರೂ ನನ್ನಲ್ಲಿ ವಿಚಾರಮಾಡಿ, ಅವರನ್ನು ಶಿಕ್ಷೆ ಮಾಡುವುದರಲ್ಲಿ ನನಗೆ ಅಡ್ಡಿ ಇಲ್ಲ. ಕೆಲಸ ಚೆನ್ನಾಗಿ ಮಾಡುವವರು ಎಂದು ಹೇಳುವುದರಲ್ಲಿಯೂ ನನಗೆ ಅಡ್ಡಿ ಇಲ್ಲ, ತಪ್ಪು ಕಾಣುವವರೆಗೆ ಎಲ್ಲರೂ ಚೆನ್ನಾಗಿ ಕೆಲಸಮಾಡುತ್ತಾರೆ. ಅವರ ತಪ್ಪುನೆಪ್ಪುಗಳು ಕಣ್ಣು ನೋಟಕ್ಕೆ ಸಿಕ್ಕಿದರೂ ಸೂಕ್ತ ಕ್ರಮವನ್ನು ವಿದ್ಯುತ್‌ವೇಗದಲ್ಲಿ ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆಂಬುದನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಸಾಮಾನ್ಯವಾಗಿ ಈ ಕಾಂಟ್ರಾಕ್ಟ್ ಸಿಸ್ಟಂನ್ನು ವಜಾ ಮಾಡಬೇಕೆಂದು ಹಲವು ಸದಸ್ಯರು ನಾನಾ ಸಲಹೆಗಳನ್ನು ಮಾಡಿದರು. ಎಲ್ಲವನ್ನೂ ಡಿಪಾರ್ಟ್‌ಮೆಂಟ್ ಮೂಲಕವೇ ಮಾಡುವುದು ಯೋಗ್ಯವೆಂದು ಇನ್ನು ಕೆಲವು ಸದಸ್ಯರು ಸಲಹೆ ಮಾಡಿದರು. ಇದರಲ್ಲಿ ನನ್ನ ಒಂದು ಅನುಭವವನ್ನು ಹೇಳುವುದಾದರೆ ಎಲ್ಲಾ ಕೆಲಸಗಳನ್ನೂ ಕೂಡ ನೇರವಾಗಿ ಸರ್ಕಾರನೇ ಮಾಡತಕ್ಕದ್ದು ಎಂದೇನಿದೆಯೋ ಅದು ಇಂಪ್ರಾಕ್ಟಿಕಲ್ ಸಜೆಷನ್. ಇದು ಅಸಾಧ್ಯವಾದ ಕೆಲಸ. ಅದರಲ್ಲಿಯೂ ಈಗಿನ ಪ್ರಮಾಣದಲ್ಲಿ ಕೆಲಸಗಳ ಒತ್ತಡ ಹೆಚ್ಚಾಗುತ್ತಾ ಇರುವಾಗ ಬುದ್ಧಿವಂತಿಕೆಯಿಂದ ಯಾವ್ಯಾವ ಕೆಲಸಗಳನ್ನು ಕಾಂಟ್ರಾಕ್ಟ್ ಮೂಲಕ ಕೊಡಬೇಕು. ಯಾವ್ಯಾವ ಕೆಲಸಗಳನ್ನು ನಾವು ಡಿಪಾರ್ಟ್‌ಮೆಂಟ್ ಮೂಲಕ ಮಾಡಬೇಕೆನ್ನುವುದರಲ್ಲಿ ಒಂದು ಲಿಮಿಟ್ಟನ್ನು ಫಿಕ್ಸ್ ಮಾಡಿ ಆ ರೀತಿಯಾಗಿ ನಾವು ಕೆಲಸಮಾಡಬೇಕು. ಎಲ್ಲವನ್ನೂ ಕೂಡ ಸರ್ಕಾರದವರೇ ತೆಗೆದುಕೊಂಡರೆ ಬಹುಶಃ ಆ ಕೆಲಸ ಮೂವ್ ಆಗುವುದು ಬಹಳ ಕಷ್ಟವಾಗುತ್ತದೆ. ಹೀಗೆ ಹೇಳುವಾಗ ಸರ್ಕಾರದವರು ಇಂತಹ ಸಂದರ್ಭಗಳಲ್ಲಿ ಒಳ್ಳೆಯ ಅಧಿಕಾರಿಗಳನ್ನೂ ಹಾಗೂ ಒಳ್ಳೆಯ ಕಂಟ್ರಾಕ್ಟರ್‌ಗಳನ್ನು ಇಟ್ಟುಕೊಂಡು ಇಂತಹ ಕೆಲಸಗಳನ್ನು ಮಾಡಬೇಕೆಂದು ಮಾನ್ಯ ಶ್ರೀ ದೇವೇಗೌಡರು ಹಾಗೂ ಇತರೇ ಸದಸ್ಯರೂ ಹೇಳಿದರು. ಏಕೆಂದರೆ ಅಧಿಕಾರಿಗಳಲ್ಲಿ ಹಾಗೂ ಕಂಟ್ರಾಕ್ಟರ್‌ಗಳಲ್ಲಿ ಒಳ್ಳೆಯವರೂ ಇರುತ್ತಾರೆ. ಕೆಟ್ಟವರೂ ಇರುತ್ತಾರೆ. ಇಂಥಾದ್ದರಲ್ಲಿ ನೀವು ಸುಮ್ಮನಿದ್ದೀರಿ. ಬಹಳ ಮೌನವಾಗಿದ್ದೀರಿ, ಬಹಳ ಆಶ್ಚರ್ಯವೆಂದು ಕಳಕಳಿಯಿಂದ ಅವರು ಹೇಳಿದರು. ಸಾಮಾನ್ಯವಾಗಿ ಏನಾದರೂ ಒಂದನ್ನು ರಿಪೇರಿ ಮಾಡಬೇಕಾದರೆ ಅವಕ್ಕೆ ಹಲವಾರು ವಿಧಗಳುಂಟು. ಆ ವಿಧಗಳಲ್ಲಿ ಯಾವುದನ್ನು ಮೊದಲು ಮಾಡಬೇಕು. ಯಾವುದನ್ನು ಆಮೇಲೆ ಮಾಡಬೇಕೆಂಬುದನ್ನು ಅನುಸರಿಸುವುದು ಕಾರ್ಯವಿಧಾನ. ಆದರೆ ಕೆಲವು ಕಂಟ್ರಾಕ್ಟರ್‌ಗಳಲ್ಲಿ ಹಾಗೂ ಕೆಲವು ಅಧಿಕಾರಿಗಳಲ್ಲಿ ಅನೈಕ್ಯತೆ ಮತ್ತು ಅಪ್ರಾಮಾಣಿಕತೆ ಕೆಲವು ವರ್ಷಗಳಿಂದ ಕೆಲವರಲ್ಲಿ ಬೆಳೆದು ಬಂದಿದೆ. ಅದನ್ನು ನಿವಾರಣೆ ಮಾಡಬೇಕಾದರೆ ಸ್ವಲ್ಪ ಕಾಲ ಬೇಕಾಗುತ್ತದೆ. ಇದು ಹಲವಾರು ವರ್ಷಗಳಿಂದ ಹಾಗೂ ನಾನಾ ಕಾರಣದಿಂದ ಬಂದಿದೆ. ಆಡಳಿತದಲ್ಲಿ ಹೆಚ್ಚಿನ ಪ್ರಗತಿಯಾಗಿ ಈ ದೇಶಕ್ಕೆ ಹೆಚ್ಚಿನ ಪ್ರಯೋಜವಾಗಬೇಕಾದರೆ ಕನ್‌ಸಿಸ್ಟೆನ್ಸಿ ಆಫ್ ಪಾಲಿಸಿ ಅಂಡ್ ಪ್ರೊಸೀಜರ್ ಇರಬೇಕು, ನಾನು ಅಧಿಕಾರ ಬಿಟ್ಟು ಹೋದರೂ, ಮುಂದೆ ಈ ಅಧಿಕಾರಕ್ಕೆ ಬರುವವರು ನಾನು ಮಾಡಿರುವ ಒಂದು ದಾರಿಯನ್ನೇ ಹಿಡಿದು ಮುಂದೆ ಹೋಗಬೇಕು. ಅದೇ

ನನ್ನ ದೃಢಸಂಕಲ್ಪ. ಆ ದಾರಿಯನ್ನು ಹಿಂಪೆ ತಿರುಗಿಸಿದರೆ ಅದು 25 ಹೆಜ್ಜೆ ಹಿಂದಕ್ಕೆ ಹೋಗು ವಂತಹ ರಿಜಲ್ಟ್‌ನಿಂದ ಏನೂ ಸರಿಹೋಗುವುದಿಲ್ಲ. ಆದ್ದರಿಂದ ಯಾವ ಇಲಾಖೆಯೇ ಆಗಲೀ ಕನ್‌ಸಿಸ್ಟೆನ್ಸಿ ಆಫ್ ಪಾಲಿಸಿ ಅಂಡ್ ಪ್ರೊಸೀಜರ್ ಇಟ್ಟುಕೊಳ್ಳದೇ ಹೋದರೆ ಪ್ರಜಾಪ್ರಭುತ್ವದಲ್ಲಿ ಶೀಘ್ರದಲ್ಲಿಯೇ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಬಹಳ ಕಷ್ಟವಾಗುತ್ತದೆಂಬುದನ್ನು ತಾವು ತಿಳಿಯಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ಯಾವಾಗ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರಜಾಪ್ರಭುತ್ವದಲ್ಲಿರತಕ್ಕ ಲೋಪದೋಷಗಳಲ್ಲಿ ಇದೂ ಒಂದು. ಅದು ನನ್ನದು ತಪ್ಪಲ್ಲ. ಇದು ಪ್ರಜಾಪ್ರಭುತ್ವದಲ್ಲಿ ಒಳಗೇ ಅಡಗಿರತಕ್ಕದ್ದು. ಇವತ್ತು ನಾನು ಅಧಿಕಾರ ಬಿಟ್ಟುಹೋದರೆ, ನೀವು ಅಧಿಕಾರಕ್ಕೆ ಬಂದರೆ, ನಾನು ಮಾಡಿದ್ದನ್ನು ಹಿಂತಿರುಗಿಸಿ ನೋಡುತ್ತೀರಿ. ಈಗ ನೀವು ಹೊಸದಾಗಿ ಮಾಡಿದರೂ ಅದು 10 ವರ್ಷಗಳ ಮುಂದೆ ಏನಾಗಿದೆಯೆಂಬುದನ್ನು ಹಿಂತಿರುಗಿಸಿ ನೋಡುತ್ತಾರೆ. ಆದ್ದರಿಂದ ಯಾವ ಇಲಾಖೆಯೇ ಆಗಲಿ ಅದು ನಾವು ಹಿಡಿದಂಥ ಪಟ್ಟು, ನೀತಿ, ನಿಯಮ, ವಿಧಿ—ಇವುಗಳನ್ನು ಪಟ್ಟಾಗಿ ಹಿಡಿದು ಅದನ್ನು ಮುಂದುವರಿಸಿಕೊಂಡು ಹೋಗುವುದು ಅವಶ್ಯಕವೆಂದು ನಾನು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಹೇಳುತ್ತಿರುವುದು ಹೊಸದಾರಿಯನ್ನು ತುಳಿಯು ವುದಿಲ್ಲ ಎಂದು ತಾನೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅನಿವಾರ್ಯ ಬಾರದ ವಿನಾ ತುಳಿಯುವುದಿಲ್ಲ. ಹಾಗೆ ಮಾಡಿದರೆ ಮಾತ್ರ ನಾವು ಹೋಗತಕ್ಕ ಮಾರ್ಗದಲ್ಲಿ ಕೆಲಸದ ವೇಗವನ್ನು ಕಾಣಲಿಕ್ಕೆ ಸಾಧ್ಯ ವಾಗಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ತಾವು ದುಡ್ಡು ತೆಗೆದುಕೊಂಡು ಬಿಲ್ ಮಾಡುವುದನ್ನು ತಪ್ಪಿಸಿದರೆ ದೊಡ್ಡ ಉಪಕಾರಮಾಡಿದಂತಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಯಾರಾದರೂ ಸರಿ ನನಗೆ ಅಂಥ ಒಂದು ನಿದರ್ಶನ ತನ್ನು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ಉಗ್ರ ಕ್ರಮ ಕೈಗೊಳ್ಳುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಆದರೆ ಇದಕ್ಕೆ ನಾನಾಗಲೇ ಪ್ರಾರ್ಥಿಸಿಕೊಂಡ ಹಾಗೆ ಮಾನ್ಯ ಸದಸ್ಯರುಗಳ ಹಾಗೂ ಸಾರ್ವಜನಿಕರ ಸಹಕಾರ ಸರ್ಕಾರಕ್ಕೆ ಅಗತ್ಯ ಎಂದು. ಈ ವಿಷಯದಲ್ಲಿ ನೀವೂ ನಾವೂ ಕೈಜೋಡಿಸಿ ಭುಜಕ್ಕೆ ಭುಜವನ್ನು ಜೋಡಿಸಿ ಕೆಲಸ ಮಾಡಿದರೆ ಅನುಕೂಲವಾಗಬಹುದು. ಆದರೆ ಇದರಲ್ಲಿ ಒಂದು ವಿಷಯವನ್ನು ತಮಗೆ ನಾನು ತಿಳಿಸುವುದಕ್ಕೆ ಇಚ್ಛಿಸುವುದೇನೆಂದರೆ ಅಪ್ರಮಾಣಿಕನನ್ನು ದಂಡನೆ ಮಾಡುವುದಕ್ಕೆ ಬದಲು ಪ್ರಾಮಾಣಿಕನಾದವನನ್ನು ದಂಡನೆ ಮಾಡುವುದಕ್ಕೆ ಹೊರಟರೆ ಆಡಳಿತದಲ್ಲಿ ಲೋಪದೋಷಗಳು ಮತ್ತು ಅನೈತಿಕತೆ ಉಂಟಾಗುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಇಲ್ಲಿಯವರೆಗೆ ಸಾಮಾನ್ಯ ಆಡಳಿತ, ಹಾಗೂ ಆಡಳಿತ ವಿಕೇಂದ್ರಿಕರಣ ಮತ್ತು ತಾಂತ್ರಿಕ ವಿಷಯಗಳ ಬಗ್ಗೆ ಹೇಳಿದ್ದಾಯಿತು. ಇನ್ನು ನಾನು ಒಂದೊಂದು ಇಲಾಖೆಗಳ ವಿಷಯವನ್ನೂ ಹೇಳಿಕೊಂಡು ಬರುತ್ತೇನೆ.

ಮೊದಲನೆಯದಾಗಿ ವಿದ್ಯುಚ್ಛಕ್ತಿ ಇಲಾಖೆ : ಇದರ ವಿಷಯದಲ್ಲೂ ಹಲವಾರು ಸಲಹೆಗಳೂ ಬಂದೂ ಮತ್ತು ಟೀಕೆಗಳೂ ಬಂದವು. ಇನ್ನು ..

ಶ್ರೀ ಎಚ್. ಡಿ. ದೇವೇಗೌಡ.—ಆ ಇಂಜಿನಿಯರ್ ಚೀಫ್ ಅವರನ್ನು ಅಪಾಯಿಂಟ್ ಮಾಡಿರಕ್ಕ ವಿಷಯದಲ್ಲಿ ಏನೂ ಹೇಳಲಿಲ್ಲವಲ್ಲ !

ಶ್ರೀ ಎಚ್. ಎಂ. ಚನ ಬಸಪ್ಪ.—ನಾನು ಯಾವಾಗಲು ಇದ್ದದ್ದನ್ನು ಇದ್ದಹಾಗೆ ಹೇಳತಕ್ಕವನು. ನಾನು ಇದರ ಬಗ್ಗೆ ಸಭೆಗೆ ಸ್ಪಷ್ಟವಾಗಿ ತಿಳಿಯಪಡಿಸುವುದೇನೆಂದರೆ ಈ ಒಂದು ಹುದ್ದೆಯನ್ನು ಕೆಲವಾರು ವರ್ಷಗಳ ಹಿಂದೆಯೇ ಕ್ರಿಯೇಟ್ ಮಾಡಲಾಗಿತ್ತು. ಈ ಹುದ್ದೆಗೆ ಕೆಲವು ಅಧಿಕಾರಗಳನ್ನು ಮಾತ್ರ ಕೊಡಲಾಗಿದೆ. ಈ ಹುದ್ದೆಯಲ್ಲಿ ಹಿಂದೆ ಇದ್ದವರು ಸತ್ತುಹೋದರು. ಆಗ ಈ ಹುದ್ದೆಯಲ್ಲಿ ಇವರನ್ನು ನೇಮಕ ಮಾಡಲಾಯಿತು. ಇವರಿಗೆ ಕೆಲವು ಅಧಿಕಾರಗಳನ್ನು ಮಾತ್ರ ನಿರ್ದೇಶ ಮಾಡಲಾಗಿದೆ. ಅವರು ಆ ಚೌಕಟ್ಟಿನಲ್ಲಿ ಮಾತ್ರ ಕೆಲಸಮಾಡಬೇಕಾಗಿದೆ. ಇವರು ಸಾಮಾನ್ಯ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಹೇಳಿದ್ದೇನೆ. ಹಾಗೆ ಅವರು ಹಸ್ತಕ್ಷೇಪ ಮಾಡಿದ್ದು ಕಣ್ಣಿಗೆ ಬಿದ್ದರೆ ಅಗತ್ಯ ವಿಚಾರಣೆ ಮಾಡಿ ಅಬಗ್ಗೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುವುದಕ್ಕೆ ನಾನು ಎಂದೂ ಹಿಂದೆ ಮುಂದೆ ನೋಡತಕ್ಕವನಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅವರಿಗೆ ಮಂತ್ರಿಗಳೇ ಜವಾಬರ್ಚಿನಲಿಲ್ಲವಂತೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಅವರು ಹಸ್ತಕ್ಷೇಪ ಮಾಡುವುದಕ್ಕೂ ಅವರು ಸದಸ್ಯರ ಜೊತೆಯಲ್ಲಿ ಸಹಕಾರ ಮಾಡದೆ ಇದ್ದದಕ್ಕೂ ವ್ಯತ್ಯಾಸವಿದೆ...

ಶ್ರೀ ಎಚ್. ಡಿ. ದೇವೇಗೌಡ.—ಈ ದಿವಸ ತಮ್ಮ ಅಧಿಕಾರದಲ್ಲಿ you are an experienced and efficient Public Works Minister. Do you support the creation of the post of Engineer-in-Chief ? Is that post necessary ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದನ್ನು ಯಾವ ಕಾರಣಕ್ಕೆ ಏತಕ್ಕಾಗಿ ಕ್ರಿಯೇಟ್ ಮಾಡಿದರು ಎಂದು ವಿಚಾರ ಮಾಡುವುದು ಈ ದಿವಸ ಅನಾವಶ್ಯಕ. ಅವರಿಗೆ ಕೊಟ್ಟಿರುವ ಅಧಿಕಾರಗಳೆಷ್ಟಿವೆ, ಅಷ್ಟರಲ್ಲಿ ಅವರು ಕೆಲಸ ಮಾಡಬೇಕು ಅನ್ನುವುದಷ್ಟೇ ನನಗೆ ಬೇಕಾದ್ದು. ಈ ದಿವಸ ಸೆಕ್ರೆಟೇರಿಯೆಟ್ ಲೆವೆಲ್‌ನಲ್ಲಿ ಯಾವುದಾದರೊಂದು ಯೋಜನೆ ಬಂದಾಗ ಅದರ ವಿಚಾರದಲ್ಲಿ ಯಾವುದಾದರೂ ಒಂದು ವಿಶೇಷ ತರಹೆಯ ಟೆಕ್ನಿಕಲ್ ಒಪಿನಿಯನ್ ಬೇಕಾಗಿದ್ದರೆ ಅವರನ್ನು ಕನ್‌ಸಲ್ಟ್ ಮಾಡುವುದಕ್ಕೆ ಇರಲಿ ಎಂದು ಇಟ್ಟುಕೊಳ್ಳಲಾಗಿದೆ.

Sri H. D. DEVE GOWDA.—With regard to a technical matter at Government level he will also be consulted. That means the opinion of the Head of the Department like the Chief Engineer will be overruled by the advice of the Engineer-in-Chief. Is it not interference in the day-do-day administration ?

Sri H. M CHANNABASAPPA.— Technical knowledge is nobody's monopoly, whether it is a small man or a big man, different views will have to be put forth and Government have to take a decision after considering all the views. We can even consult the Board of Chief Engineers, if necessary and we can, if necessary even go to a higher technical parsonnel and consult. Therefore, technical ability and technical opinion is nobody's monopoly.

Sri H. D. DEVE GOWDA.—There must be some limit. The Chief Engineer is empowered as Head of the Department. If tomorrow, you are going to appoint another person Special Super Engineer-in-Chief, he can also turn down the opinion given by the present Super Engineer-in-Chief. You must put an end to this.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳುತ್ತಿರುವುದು ಇವರಿಗೆ ಇರತಕ ಕಾರ್ಯವ್ಯಾಪ್ತಿ ಬಹಳ ಕಡಮೆ ಎಂದು. ಹಾಗಾದರೆ ಇವರ ನೇಮಕದ ಬಗ್ಗೆ ಅಗತ್ಯವಿರಲಿಲ್ಲವಲ್ಲವೇ ? ಮತ್ತು ತಾವು ಹೇಳುತ್ತಿರುವ ತತ್ವ ಒನ್ ಜಾಬ್ ಫಾರ್ ಒನ್ ಮ್ಯಾನ್ ಎಂಬುದಕ್ಕೆ ಇದು ವಿರುದ್ಧವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಉದಾಹರಣೆಗೆ ಹೇಳುವುದಾದರೆ ಸೂಪಾ ಡ್ಯಾಂ ವಿಚಾರದಲ್ಲಿ ಒಬ್ಬ ಚೀಫ್ ಇಂಜಿನಿಯರಿದ್ದಾರೆ. ಜೊತೆಗೆ ನಮ್ಮ ಟೆಕ್ನಿಕಲ್ ಸಮಿತಿ ಬೇರೆ ಇದೆ. ಅದರಲ್ಲಿ ದಕ್ಷರಾದ ಅನೇಕ ಜನ ನಿವೃತ್ತ ಚೀಫ್ ಇಂಜಿನಿಯರುಗಳೂ ಇದ್ದಾರೆ...

Sri M. S KRISHNAN.—If it is a matter of only very little responsibility, there is no necessity for such a post as Engineer-in-Chief. The Engineer-in-Chief is the Chairman of the Water Supply Board ; he is the Additional Secretary and he is also in charge of scarcity relief operations. When you went there, he never cared to talk to you. You are a very good Administrator and a good Minister. Even the Administrative Reforms Commission has stated you must give one job for each man. So is it correct to give him so many items ?

Sri H. M. CHANNABASAPPA.—I am only clearing certain doubts that have been expressed. There is a Technical Committee consisting of some Senier Chief Engineers but they have not been able to solve the techinical problem as to what kind of Supa Dam has to be constructed. We have invited Technical Experts from all over India. Even they are feeling nervous about this. I have asked for technical opinion, so that we may go ahead. ನಾನು ಹೇಳುತ್ತಿರುವುದು ಈ ಟೆಕ್ನಿಕಲ್ ವಿಷಯಗಳಲ್ಲಿ ಹೀಗೇ ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಪಿ.ಡಬ್ಲ್ಯು.ಡಿ. ಸೆಕ್ರೆಟರಿಯವರು ಸೆಕ್ರೆಟೇರಿಯೆಟ್ ಲೆವಲ್ಲಿನಲ್ಲಿ ಏನಿದ್ದಾರೆ ಅವರು ತಾಂತ್ರಿಕ ಪರಿಶ್ರಮವುಳ್ಳವರಲ್ಲ. ಅವರು ಇರುವುದು ಆಡ್ಮಿನಿಷ್ಟ್ರೇಟಿವ್ ಸೈಡ್. ಅದಕ್ಕಾಗಿ ಒಬ್ಬ ಟೆಕ್ನಿಕಲ್‌ಮ್ಯಾನ್ ಸೆಕ್ರೆಟೇರಿ ಯೆಟ್ ಲೆವೆಲ್ಲಿನಲ್ಲಿರಲಿ ಎಂದು ಇವರನ್ನು ಇಟ್ಟುಕೊಂಡಿದೆ.

ಒಂದು ಬೋರ್ಡ್ ಆಫ್ ಚೀಫ್ ಎಂಜಿನಿಯರ್ಸ್ ಇರಬೇಕು, ಇಂಥ ವಿಷಯಗಳಲ್ಲಿ ಅವರು ತೀರ್ಮಾನಕ್ಕೆ ಬರುವುದು ನ್ಯಾಯ. ಒಬ್ಬ ಚೀಫ್ ಎಂಜಿನಿಯರು ಧಾರವಾಡದಲ್ಲಿರುವುದು, ಇನ್ನೊಬ್ಬರು ಮೈಸೂರಿನಲ್ಲಿರುವರು, ಹೀಗೆ ಬೇರೆ ಬೇರೆ ಕಡೆಗಳಲ್ಲಿರುವವರು, ಶಿಕ್ಷಣ ಅವರನ್ನು ಒಂದು ಕಡೆ ಸೇರಿಸಿ ತೀರ್ಮಾನ ಮಾಡುವುದು ಕಷ್ಟವಾಗುತ್ತದೆ. ಬೋರ್ಡ್ ಆಫ್ ಚೀಫ್ ಎಂಜಿನಿಯರ್ಸ್ ಅನೇಕ ವಿಷಯಗಳ ಬಗ್ಗೆ ಸಲಹೆ ಕೊಡಬೇಕಾಗುವುದು. ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ, ರಚನಾತ್ಮಕ ಸಲಹೆಗಳನ್ನು ಸರಕಾರ ಬಹಳ ಕಳಕಳಿಯಿಂದ ಪರಿಶೀಲಿಸುವುದು ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಎಂಜಿನಿಯರ್ ಇನ್ ಚೀಫ್ ಕಿತ್ತುಹಾಕಿ, ಬೇಕಾದರೆ ಅಡೀಷನಲ್ ಸೆಕ್ರೆಟರಿ ಮಾಡಿ, ಬೇಡವೆಂದು ಹೇಳುವುದಿಲ್ಲ, ಎಲ್ಲ ಅಧಿಕಾರವನ್ನೂ ಒಬ್ಬರಿಗೇ ಕೊಡಬೇಡಿ

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ವಿದ್ಯುಚ್ಛಕ್ತಿ ಇಲಾಖೆಗೆ ಬರುತ್ತೇನೆ, ಈ ಇಲಾಖೆಯಲ್ಲಿ 3 ಅಂಗಗಳು ಕೆಲಸಮಾಡುತ್ತಿವೆ, ಒಂದು ಮೈಸೂರ್ ಪವರ್ ಕಾರ್ಪೊರೇಷನ್, ಒಂದು ಇನ್‌ವೆಸ್ಟಿಗೇಷನ್ ಯೂನಿಟ್ ಅಂಡರ್ ದಿ ಗೈಡೆನ್ಸ್ ಆಫ್ ಗವರ್ನಮೆಂಟ್, ಒಂದು ಎಂ.ಎಸ್.ಇ.ಬಿ. ಇದರ ಮೇಲೆ ಸರಕಾರವಿದೆ. ಈ ಅಂಗಗಳಲ್ಲಿ ವಿದ್ಯುಚ್ಛಕ್ತಿ ಇಲಾಖೆ ಕೆಲಸ ಮಾಡುತ್ತಿದೆ. ಇದರಲ್ಲಿ ಮೈಸೂರು ಪವರ್ ಕಾರ್ಪೊರೇಷನ್ ಪವರ್ ಉತ್ಪತ್ತಿಮಾಡುವುದು, ಉತ್ಪತ್ತಿ ಮಾಡಿದ ವಿದ್ಯುತ್ತನ್ನು ವಿತರಣೆಗೆ ಎಂ.ಎಸ್.ಇ.ಬಿ.ಗೆ ಕೊಡುವುದು. ಎಂ.ಎಸ್.ಇ.ಬಿ. ವಿತರಣೆ ಕೆಲಸದಲ್ಲಿ ತೊಡಗಿರುವುದು ಮತ್ತು ಸರಕಾರ ಹೊಸಹೊಸ ವಿದ್ಯುತ್‌ಉತ್ಪತ್ತಿ ಕೇಂದ್ರಗಳೇನಿವೆ ಅವುಗಳನ್ನು ಪರಿಶೀಲಿಸಿ ಇನ್‌ವೆಸ್ಟಿಗೇಷನ್ ಮಾಡಿ ಹೊಸಹೊಸ ಯೋಜನೆಗಳನ್ನು ತಯಾರಿಸುವುದು. ಈ ಮೂರು ಅಂಗಗಳಲ್ಲಿ ಕೆಲಸ ನಡೆಯುತ್ತಿದೆ. ಇದರಲ್ಲಿ ಒಂದೊಂದು ಅಂಗದ ವಿವರಗಳನ್ನು ಕೊಡುವುದರ ಮುನ್ನ ಇದಕ್ಕೆ ಯಾವ ರೀತಿ ವ್ಯವಸ್ಥೆಯಾಗಿದೆ ಎಂಬುದನ್ನು ಸಾರ್ವಜನಿಕರು ತಿಳಿಯುವುದು ಬಹಳ ಅವಶ್ಯಕ. ಎಂ.ಎಸ್.ಇ.ಬಿ. ಸೆಂಟ್ರಲ್ ಎಲೆಕ್ಟ್ರಿಸಿಟಿ ಆಕ್ಟಿನ ನಿಯಮಗಳಿಗನುಸಾರವಾಗಿ ಕೆಲಸಮಾಡುವುದು, ಅದು ಅಧಿಕಾರವನ್ನು ಆ ಆಕ್ಟಿನಿಂದ ತೆಗೆದುಕೊಳ್ಳಬೇಕು. ಮೈಸೂರು ಪವರ್ ಕಾರ್ಪೊರೇಷನ್ ಜಾಯಿಂಟ್ ಸ್ಟಾಕ್ ಕಂಪೆನೀಸ್ ಆಕ್ಟು ಪ್ರಕಾರ ಕೆಲಸ ನಡೆಸುವುದು ಮತ್ತು ವಿದ್ಯುತ್ ಉತ್ಪಾದನೆ, ಸಂಶೋಧನೆ ಇದು ನೇರವಾಗಿ ಸರಕಾರದ ಆಕ್ಟಿನ ಕೆಳಗೆ ನಡೆಯುವುದು. ಇದರಲ್ಲಿ ಮೊದಲನೆಯದಾಗಿ ಎಂ.ಎಸ್.ಇ.ಬಿ. ವಿಷಯ ತೆಗೆದುಕೊಳ್ಳೋಣ. ಇದರ ಬಗ್ಗೆ ಶ್ರೀ ಬಂಗಾರಪ್ಪನವರು ಬಹಳ ಉಗ್ರವಾಗಿ ಕಳಕಳಿಯಿಂದ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದರು, ಅದನ್ನು ಕೇಳಿ ನನಗೆ ಭಯವಾಯಿತು. ಕಾರಣ 18 ಕೋಟಿ ರೂಪಾಯಿ ನಷ್ಟವಾಯಿತು ಎಂದು ಅವರು ಹೇಳಿದ್ದನ್ನು ಕೇಳಿ ಎದೆ ಗಡಗಡನೆ ನಡುಗಿತು. ಅದರ ಬಗ್ಗೆ ಬುಕ್ ಇದೆ, ಅದರಲ್ಲಿ ನೋಡಿದಾಗ ಅವರು ಅದನ್ನು ಪೂರ್ಣವಾಗಿ ಓದಿಲ್ಲ, 18 ಕೋಟಿ ಎಂದು ಬುಕ್ಕಿನಲ್ಲಿರುವುದನ್ನು ನೋಡಿ ತಕ್ಷಣ ಹೇಳಿದ್ದಾರೆ. ಉತ್ಸಾಹ ಸ್ವಲ್ಪ ಹೆಚ್ಚಾದಾಗ ಹಾಗಾಗುವುದು ಸ್ವಾಭಾವಿಕ. ಈ 18 ಕೋಟಿ ಅವರು ಹೇಳಿದ್ದು ನಷ್ಟವಲ್ಲ, ಅದು ಕಾಸ್ಟು ಆಫ್ ಸ್ಟೋರ್ಸ್ ಟ್ರಾನ್ಸ್‌ಫರ್ಡ್ ಫ್ರಮ್ ಸೆಂಟ್ರಲ್ ಸ್ಟೋರ್ಸ್ ಡಿವಿಷನ್. ಸೆಂಟ್ರಲ್ ಸ್ಟೋರ್ಸ್‌ನಿಂದ ಎಲ್ಲಾ ಡಿವಿಜನ್ನುಗಳಿಗೂ 18 ಕೋಟಿ ರೂಪಾಯಿಗಳ ಪದಾರ್ಥಗಳನ್ನು ವರ್ಗಾಯಿಸಿದ್ದಾರೆ. ಅವರ ಉತ್ಸಾಹದಿಂದ ತಪ್ಪಾಗಿದೆ, ಅದು ಅವರ ತಪ್ಪಲ್ಲ. ಇನ್ನೊಂದು ಹೇಳಿದರು, 27 ಕೋಟಿ ನಷ್ಟವಾಗಿದೆ ಎಂದು ವರದಿಯಿಂದ ಓದಿದರು. ಅದೂ ಕೂಡ ನಷ್ಟವಲ್ಲ, 27 ಕೋಟಿ ರೂಪಾಯಿಗಳ ಪದಾರ್ಥಗಳನ್ನು ಮೆಷಿನರಿ ಮುಂತಾದುವನ್ನು ವಿವಿಧ ಡಿವಿಜನ್ನುಗಳು ಮತ್ತು ಸರ್ಕಲ್ಲುಗಳಿಗೆ ವಿತರಣೆ ಮಾಡಿರುವುದಕ್ಕೆ ಸಂಬಂಧಪಟ್ಟಿರುವುದು. ಇದನ್ನು ಸ್ಪಷ್ಟಮಾಡುತ್ತಿದ್ದೇನೆ. ಎಂ.ಎಸ್.

(ಶ್ರೀ ಎಚ್. ಎಂ. ಚನ್ನಬಸಪ್ಪ)

ಇ.ಬಿ.ಯ ಟ್ರೆಜರಿ ಮತ್ತು ಬ್ಯಾಂಕ್ ಬ್ಯಾಲೆನ್ಸ್ ರಿಕನಸ್ಸೈಲ್ ಆಗಿಲ್ಲ. 1970-71, 1971-72 ಈ ಸಾಲುಗಳ ಲೆಕ್ಕ, ಬ್ಯಾಲೆನ್ಸ್ ಎಲ್ಲಾ ರಿಕನ್‌ಸೈಲ್ ಆಗಿದೆ, ರಿಕನ್‌ಸೈಲ್ ಆಗದಿರುವುದು ಸ್ವಲ್ಪ ವಿದೆ. ಇದಕ್ಕೆ ವಿಶೇಷ ಸಿಬ್ಬಂದಿ ಇಟ್ಟು ರಿಕನ್‌ಸೈಲ್ ಮಾಡುವ ಬಗ್ಗೆ ಕಾರ್ಯಕ್ರಮ ನಡೆಯು ತ್ತಿದೆ. ಆದುದರಿಂದ ಅವರು ಹೇಳಿರುವುದು ಸರಿಯಲ್ಲ ಎಂದು ಮಾತ್ರ ಅರಿಕೆ ಮಾಡುತ್ತೇನೆ.

ಮತ್ತೊಂದು ಹೇಳಿದರು. ನಮ್ಮ ವಿದ್ಯುಚ್ಛಕ್ತಿ ಬೋರ್ಡ್ ಛೇರ್ಮನ್ ಮಿನಿಸ್ಟರ್ ಅಲ್ಲ. ಛೇರ್ಮನ್ನರು ಒಂದು ಏರ್ ಕಂಡೀಷನ್ಡ್ ರೂಂ ಮಾಡಿಕೊಂಡಿರುವುದು ನಿಜವೇ ಎಂದು ಕೇಳಿದರು. ಅದಕ್ಕೆ ಮಾನ್ಯ ಸದಸ್ಯರಿಗೆ ತಿಳಿಸುವುದಾದರೆ 1970-71ರಲ್ಲಿ ರಾಜ್ಯಪಾಲರ ಆಡಳಿತವಿತ್ತೆಂದು ಕಾಣುತ್ತದೆ, ಆ ಕಾಲದಲ್ಲಿ ವರ್ಲ್ಡ್ ಬ್ಯಾಂಕಿನ ಅಫಿಷಿಯಲ್ಸ್ ಬಂದಿದ್ದರು, ಅವರ ಜೊತೆಯಲ್ಲಿ ಕಲೆತು ಕೆಲಸಮಾಡಬೇಕಾಗಿತ್ತು, ರೂಫ್ ಲೆವಲ್ ಕಡವೆ ಇತ್ತು, ವರ್ಲ್ಡ್ ಬ್ಯಾಂಕಿನವರಿಂದ ಪರಿ ಹಾರ ಪಡೆಯಬೇಕಾಗಿದ್ದುದರಿಂದ ಅವರಿಗಾಗಿ ಆಗಿದ್ದ ಛೇರ್ಮನ್ನರು 9140 ರೂಪಾಯಿಗಳ ವೆಚ್ಚ ದಲ್ಲಿ ಏರ್ ಕಂಡಿಷನ್ ಮಾಡಿಸಿದರು. ಒಂದು ಏರ್ ಕಂಡೀಷನ್ ರೂಂ ಆಗ ಮಾಡಲಾಯಿತು. ಈಗ ವಿದ್ಯುತ್ ಕಡಿತವಿರುವುದರಿಂದ ಒಂದು ದಿವಸ ಕೂಡ ಅದರ ಉಪಯೋಗ ಮಾಡಿಲ್ಲವೆಂದು ಸ್ಪಷ್ಟ ಮಾಡುತ್ತೇನೆ. ಎರಡನೆಯದು ಈಗಿರುವ ಅಧ್ಯಕ್ಷರು ಅದನ್ನು ಮಾಡಿಸಿಕೊಂಡಿಲ್ಲ ಎಂದು ವಿನಯದಿಂದ ಅರಿಕೆಮಾಡುತ್ತೇನೆ.

ಮಿಸ್‌ಯೂಸ್ ಆಫ್ ಪವರ್ ಇನ್ ಪರ್ಚೇಸ್ ಅಂಡ್ ಸೇಲ್ ಆಫ್ ಸ್ಟೋರ್ಸ್ ಕೆಲವು ಕಡೆ ಆಗಿದೆ ಎಂದು ಹೇಳಿದ್ದಾರೆ. ಸ್ಟೋರ್ಸ್‌ಗೆ ಬೇಕಾದ್ದನ್ನು ಕಂಟ್ರಾಕ್ಟರು ಸರಬರಾಯಿ ಮಾಡುವು ದಿಲ್ಲ, ಪರ್ಚೇಸ್ ಮಾಡಬೇಕು. ಪರ್ಚೇಸ್ ಮಾಡುವುದೇನೆಂದರೆ ಎಲ್ಲಾ ದೊಡ್ಡ ದೊಡ್ಡ ಐಟಂಗಳನ್ನು ಪ್ರತಿಯೊಂದನ್ನೂ ವಿಧಿನಿಯಮಗಳಿಗನುಗುಣವಾಗಿ ಕೊಂಡು ಎಲ್ಲಾ ಸರ್ಕಲ್ಲುಗಳು ಮತ್ತು ಡಿವಿಜನ್ನುಗಳಿಗೆ ಹಂಚುವರು. ಸರ್ಕಲ್ಲುಗಳಲ್ಲಿ ಮತ್ತು ಡಿವಿಜನ್ನುಗಳಲ್ಲಿ ಕೆಲವು ಡೀಸಲ್, ಎಣ್ಣೆ, ಸಿಮೆಂಟು ಮುಂತಾದ ಅವಶ್ಯಕವಿರುವ ವಸ್ತುಗಳನ್ನು ಅವರು ತೆಗೆದುಕೊಳ್ಳಬೇಕು. ಒಂದು ಲಕ್ಷ ದಿಂದ 2-3 ಲಕ್ಷವವರೆಗೆ ರೂಲ್ಸ್ ಪ್ರಕಾರ ಕೊಳ್ಳಬೇಕು. ಹಾಗಿರುವಾಗ ಎಲ್ಲಾ ಡಿವಿಜನ್ನುಗಳಲ್ಲೂ ಕೊಳ್ಳುವರು ಎಂದು ಹೇಳುವುದು ಸರಿಯಲ್ಲ. ಸೆಂಟ್ರಲ್ ಆಫೀಸಿನಲ್ಲಿ ಪರ್ಚೇಸ್ ಮಾಡುವುದಕ್ಕೆ ಪರ್ಚೆಸ್ ಕಮಿಟಿ ಇದೆ. ವಿದ್ಯುಚ್ಛಕ್ತಿ ಬೋರ್ಡಿಗೆ ಆಕ್ಟು, ವಿಧಿ ನಿಯಮ ಇದೆ. ಅದಕ್ಕನುಸಾರ ವಾಗಿ ಮಾಡಬೇಕು.

ನಂತರ 4 ಕೋಟಿ 36 ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ಹೇಳಿದರು. 4 ಕೋಟಿ ಅಲ್ಲ, 4 ಲಕ್ಷ 36 ಸಾವಿರ ರೂಪಾಯಿ ಅದು.

ಅಲ್ಲಿ ನಾಲ್ಕು ಲಕ್ಷ 36 ಸಾವಿರ ರೂಪಾಯಿಗಳ ಪದಾರ್ಥಗಳು ಕಳುವು ಆಗಿದೆ ಎನ್ನುವುದು ಸತ್ಯ. ವಿದ್ಯುಚ್ಛಕ್ತಿ ಇಲಾಖೆ ಏನು ಇದೆ, ಅದು ತನ್ನ ಎಲ್ಲಾ ಪದಾರ್ಥಗಳನ್ನು ಗೋಡೋನ್ ಒಳಗೆ ಇಟ್ಟುಕೊಂಡು ಬೀಗ ಹಾಕುವ ಹಾಗಿಲ್ಲ, ಲೈನ್‌ನಲ್ಲಿಯೇ ಕೆಲವು ಪದಾರ್ಥಗಳು ಇರುತ್ತವೆ, ಕೆಲವು ಕಳ್ಳರು 4 ಲಕ್ಷ 36 ಸಾವಿರ ರೂಪಾಯಿಗಳ ಪದಾರ್ಥಗಳನ್ನು ಕದ್ದು ಇರುವುದು ನಿಜ. ಎಂ.ಎಸ್. ಇ.ಬಿ.ಯವರು ಪೋಲೀಸರಿಗೆ ದೂರು ಕೊಟ್ಟಿರುವುದು ನಿಜ, ಕೆಲವು ಕನ್‌ವಿಕ್ಷನ್ಸ್ ಆಗದೆ ಹೋಗಿ ಬಿಟ್ಟಿವೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅವನ್ನು ತೆಗೆದುಕೊಂಡಿ ದ್ದಾರೆ ಎಂದು ನಾನು ಸ್ಪಷ್ಟಪಡಿಸುತ್ತೇನೆ.

10-00 A.M.

ಶ್ರೀ ಕಾಗೋಡು ತಿಮ್ಮಪ್ಪ.—ಯಾರೋ ಹೈದರಾಬಾದ್‌ನಲ್ಲಿ ಮನೆ ಕಟ್ಟಿದ್ದಾರಲ್ಲ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಅದನ್ನೂ ಹೇಳುತ್ತೇನೆ. ಒಬ್ಬ ಸೂಪರಿಂಟೆಂಡೆಂಟ್ ಇಂಜಿ ನಿಯರ್ ಅವರು 1969ರಲ್ಲಿ ಬೇಕಾದಷ್ಟು ಹಣವನ್ನು ಲೂಟಿ ಮಾಡಿ ನಾಲ್ಕಾರು ಮನೆಗಳನ್ನು ಕಟ್ಟಿ ಐದು ಸಾವಿರ ರೂಪಾಯಿ ವರಮಾನ ಬರುವ ಹಾಗೆ ಮಾಡಿಕೊಂಡಿದ್ದಾರೆ ಎಂದು ಮಾನ್ಯ ಸದಸ್ಯ ರೊಬ್ಬರು ಹೇಳಿದರು. ಅದನ್ನು ನಾನು ನೋಟ್ ಮಾಡಿಕೊಂಡಿದ್ದೇನೆ; ಅದನ್ನು ನನಗೆ ಈ ಸಭೆಯಲ್ಲಿ ಹೇಳುವುದಕ್ಕಿಂತ, ತಮಗೆ ಏನು ವಿವರ ತಿಳಿದಿದೆ ಅದನ್ನು ನನಗೆ ತಿಳಿಸಿದರೆ ಅದನ್ನು ತಕ್ಷಣ ವಿಚಾರ ಮಾಡಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿ ಕೊಟ್ಟಿದ್ದೇ ನಡೆದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೂ ನಡೆಸಿಕೊಡುತ್ತೇನೆ, ಅಕಸ್ಮಾತ್ ಲೋಪ ಇದ್ದರೆ, ಲೋಪ ಎಂದು ಒಪ್ಪಿಕೊಳ್ಳುತ್ತೇನೆ. ಕಂಟ್ರಾಕ್ಟರಿಗೆ 3 ಕೋಟಿ ರೂಪಾಯಿಗಳ ಸಿಮೆಂಟ್, 5 ಕೋಟಿ ರೂಪಾಯಿಗಳ ಸ್ಟೀಲ್‌ಅನ್ನು ಪೋಲ್ಸ್ ತಯಾರು ಮಾಡುವುದಕ್ಕೆ ಕೊಟ್ಟಿದ್ದಾರೆ, ಆರೂವರೆ ಲಕ್ಷ ಪೋಲ್ಸ್ ಮಾತ್ರ ತಯಾರು ಆಗಿವೆ ಎಂದು ಹೇಳಿದರು, ನಾನು ಸ್ಪಷ್ಟಪಡಿಸುತ್ತೇನೆ, ಯಾವ ಕಂಟ್ರಾಕ್ಟರಿಗೂ ನಾವು ಸಿಮೆಂಟ್ ಕೊಡುವುದಿಲ್ಲ, ಸ್ಟೀಲ್ ಕೊಡುವುದಿಲ್ಲ, ಅವರೇ ಸಿಮೆಂಟ್ ಮತ್ತು ಸ್ಟೀಲನ್ನು ಒದಗಿಸಿಕೊಂಡು ಕೆಲಸಮಾಡಬೇಕು. 15 ಜನ ಕಂಟ್ರಾಕ್ಟರುಗಳಿಗೆ ಕೆಲಸ ಕೊಟ್ಟಿದ್ದೇವೆ ಎನುವುದನ್ನು ಒಪ್ಪಿಕೊಳ್ಳುತ್ತೇನೆ. ನಮ್ಮಲ್ಲಿ ಬೇಕಾದಷ್ಟು ಡಿಪೋಗಳು ಇವೆ. ನಮ್ಮಲ್ಲಿ ಪೋಲ್ಸ್ ತಯಾರು ಮಾಡುವುದಕ್ಕೆ 45 ಡಿಪಾರ್ಟ್‌ಮೆಂಟಲ್ ಸೆಂಟರ್ಸ್ ಇವೆ. ಇದೂ ಸಾಲದೆ ಇರುವುದರಿಂದ, ಜರೂರು ಪೋಲ್ಸ್‌ಗಳ ಅವಶ್ಯಕತೆ ಇರುವುದರಿಂದ, ಟೆಂಡರ್ ಕಾಲ್‌ಫಾರ್ ಮಾಡಿ, ಲೀಸ್ಟ್ ಟೆಂಡರ್ಸ್ ಅಪ್ರೂವ್ ಮಾಡಿ,15 ಜನ ಕಂಟ್ರಾಕ್ಟರುಗಳಿಗೆ ಕೊಟ್ಟಿರತಕ್ಕದ್ದು ಸರಿ. ಅವರಿಗೆ ಸಿಮೆಂಟ್ ಮತ್ತು ಸ್ಟೀಲ್ ಕೊಟ್ಟಿದ್ದೇವೆಂದು ಹೇಳುವುದು ತಪ್ಪು ಅಭಿಪ್ರಾಯ ಎಂದು ನಾನು ವಿನಯದಿಂದ ತಿಳಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮ ಇಲಾಖೆಯವರೇ ಹೇಳಿದರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದೇ ನನಗೆ ಬಂದಿರುವ ಕಷ್ಟ. ನನಗೆ ಒಂದು ಫೋನ್ ಮಾಡಿದರೆ ತಕ್ಷಣ ಆ ವಿಷಯ ತಿಳಿಸುತ್ತೇನೆ. ಮಿಸ್‌ಯೂಸ್ ಆಫ್ ಪವರ್ ಇನ್ ಲೋಕಲ್ ಪರ್ಚೇಸ್ ಬಗ್ಗೆ, ಪ್ರಿಪರೇಷನ್ ಆಫ್ ಡಿಫರೆಂಟ್ ಬ್ಯಾಲೆನಸ್ ಶೀಟ್ ಬಗ್ಗೆ ಹೇಳಿದರು. ನನಗಂತೂ ಇದು ಆಶ್ಚರ್ಯವಾಯಿತು. ಎಲ್ಲಿಯಾದರೂ ಡಿಫರೆಂಟ್ ಬ್ಯಾಲೆನ್ಸ್‌ಷೀಟ್ ತಯಾರು ಮಾಡುವುದಕ್ಕೆ ಆಗುತ್ತದೆಯೇ ? ಸೆಂಟ್ರಲ್ ಆಕ್ಟ್ ಕೆಳಗೆ ಕೆಲಸಮಾಡತಕ್ಕಂಥ ಒಂದು ಆರ್ಗನೈಜೇಷನ್ 2-3-4 ತರಹ ಬ್ಯಾಲೆನ್ಸ್‌ಷೀಟ್‌ಅನ್ನು ತಯಾರು ಮಾಡುವುದು ಸಾಧ್ಯವೇ ಇಲ್ಲ. ಇದು ಮಾರ್ವಾಡಿ ಅಂಗಡಿಯಲ್ಲ. ಇಚ್ಛೆ ಬಂದಹಾಗೆ ಮಾಡಿಕೊಳ್ಳಲಿಕ್ಕೆ ಇದು ಪ್ರೈವೇಟ್ ಸಂಸ್ಥೆಯಲ್ಲ ಪ್ರಿಸ್ಕ್ರೈಬ್ಡ್ ಫಾರ್ಮ್ಸ್ ಇವೆ, ಕಂಟ್ರೋಲರ್ ಆಫ್ ಅಕೌಂಟೆಂಟ್ ಜನರಲ್ ಪ್ರಿಸ್ಕ್ರೈಬ್ ಮಾಡಿದ್ದಾರೆ. ಆಡಿಟ್ ಕೂಡ ಆಗುತ್ತದೆ. ಎಲೆಕ್ಟ್ರಿಸಿಟಿ ಆಕ್ಟಿನಲ್ಲಿ ಸೆಕ್ಷನ್ 60ರಲ್ಲಿ Accounts are audited by the Accountant General ಎಂದು ಇದೆ. ಬೇರೆ ಬೇರೆ ಬ್ಯಾಲೆನ್ಸ್‌ಷೀಟ್‌ಅನ್ನು ತಯಾರ ಮಾಡುತ್ತಾರೆ ಎನ್ನುವುದು ನಂಬುವುದು ಕಷ್ಟ, ನಂಬುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಬೈರೇಗೌಡರು, ಒಂದು ಮಾತನ್ನು ಹೇಳಿದರು. ರೂರಲ್ ಎಲೆಕ್ಟ್ರಿಫಿಕೇಷನ್ ಏನು ಇದೆ, ಅದು ಬಹಳ ಡಿಲೇ ಆಗುತ್ತದೆ, ಎಂದು. ಅದು ನಿಜ. ಆರ್.ಇ.ಸಿ.ಸ್ಕೀಂನಲ್ಲಿ ಕಾರ್ಪೊರೇಷನ್‌ನವರು ಕ್ಲಿಯರೆನ್ಸ್ ಕೊಡುವವರೆಗೆ ನಾವು ಸ್ಟಾರ್ಟ್ ಮಾಡುವ ಹಾಗಿಲ್ಲ. ಆರ್.ಇ.ಸಿ. ಸ್ಕೀಂನಲ್ಲಿ ಕೋಲಾರ ಜಿಲ್ಲೆಯ ಕೆಲವು ತಾಲ್ಲೂಕುಗಳು ಸೇರಿವೆ. ಅಲ್ಲಿಂದ ಕ್ಲಿಯರೆನ್ಸ್ ಬರುವವರೆಗೆ ನಾವು ಅವನ್ನು ಪ್ರಾರಂಭ ಮಾಡುವ ಹಾಗಿಲ್ಲ. ಆದ್ದರಿಂದ ಡಿಲೆ ಆಗಿರುವುದು ನಿಜ. ಇದರ ಬಗ್ಗೆ ಬೇಗನೆ ಕ್ಲಿಯರೆನ್ಸ್ ತರಿಸಲಿಕ್ಕೆ ವ್ಯವಸ್ಥೆ ಮಾಡುತ್ತೇನೆ. ಮತ್ತೆ ಮಾನ್ಯ ಸದಸ್ಯರಾದ ರುದ್ರಪ್ಪನವರು ಹೇಳಿದರು, ಸ್ಟೆಷಲ್ ಸ್ಟೇಷನ್ಸ್‌ಅನ್ನು ಕಟ್ಟುವುದಕ್ಕೆ ನಿಧಾನವಾಗುತ್ತಿದೆ, ಎಂದು. ಇದರ ಬಗ್ಗೆ ನಾನು ತಮಗೆ ಹೇಳುವುದಾದರೆ, ಹಿಂದೆ ಎಂದೂ ನಡೆಯದೆ ಇರುವಷ್ಟು ಕೆಲಸ ಈಗ ನಡೆಯುತ್ತಿದೆ. ಲೋ ವೋಲ್ಟೇಜ್ ತಪ್ಪಿಸಿ ಸರಿಯಾದ ರೀತಿ ವ್ಯವಸ್ಥೆ ಮಾಡಬೇಕು ಎಂದು ಈಗಾಗಲೇ ಅನೇಕ ಸಬ್ ಸ್ಟೇಷನ್‌ಗಳನ್ನು ನಾವು ಕಟ್ಟಿದ್ದೇವೆ. ಈಗ ಕಟ್ಟಿರತಕ್ಕ ಸಬ್ ಸ್ಟೇಷನ್‌ಗಳು ಏನು ಇವೆ, ಅವು ಆಂಗಲ್ ಐರನ್ ಸಿಕ್ಕದೆ ಇರುವುದರಿಂದ ಸ್ವಲ್ಪ ನಿಧಾನವಾಯಿತು. ಅದು ವಿನಹ ಬೇರೆ ಏನೂ ಇಲ್ಲ. ಅದನ್ನು ಬೇಗ ಮಾಡಿಕೊಡುವುದಕ್ಕೆ ನನ್ನ ಅಡ್ಡಿಯಿಲ್ಲ. ಮಾನ್ಯ ಸದಸ್ಯರಾದ ರಾಮೇಗೌಡರು, ರೀಕನೆಕ್ಟ್ ಮಾಡುವಾಗ 20 ರೂಪಾಯಿಗಳನ್ನು ಚಾರ್ಜ್ ಮಾಡುತ್ತಾರೆ ಎಂದು ಹೇಳಿದರು. ಅದು ಸರಿಯಲ್ಲ, ರೀಕನೆಕ್ಟ್ ಮಾಡಲಿಕ್ಕೆ ನಾವು ಚಾರ್ಜ ಮಾಡುವುದು. ಯಾರಾದರೂ ನಮ್ಮ ಡಿಪಾರ್ಟಮೆಂಟನವರು ಡಿಸ್‌ಕನೆಕ್ಟ್ ಮಾಡುವುದಕ್ಕೆ ಹೋದಾಗ ಪ್ರೈವೇಟ್ ಪಾರ್ಟೀಸ್ ಅಡ್ಡಿಮಾಡಿದರೆ ನಾವು ಮೇನ್ ಲೈನ ನಲ್ಲಿ ಡಿಸ್‌ಕನೆಕ್ಟ್ ಮಾಡಬೇಕಾಗುತ್ತದೆ. ಅಂಥವರಿಗೆ ಮಾತ್ರ 20 ರೂಪಾಯಿ ಚಾರ್ಜ್ ಮಾಡಬೇಕಾಗುತ್ತದೆಯೇ ವಿನಹ ಸರ್ವೇ ಸಾಧಾರಣವಾಗಿ 10 ರೂಪಾಯಿ ಮೇಲ್ಪಟ್ಟು ಚಾರ್ಜ ಮಾಡುವುದಿಲ್ಲ. ಮತ್ತೆ ಡಿಸ್ಕ್ರಿಮಿನೇಷನ್ ಇನ್ ರೇಟ್ಸ್ ಬಗ್ಗೆ ಹೇಳಿದರು. 4-5 ಪೈಸೆಯಂತೆ ಎಂ.ಎಸ್.ಇ.ಬಿ.ಯವರು ಮೈಸೂರು ಪವರ್ ಕಾರ್ಪೊರೇಷನ್ ನಿಂದ ಕೊಂಡುಕೊಳ್ಳುತ್ತಾರೆ ಎಂದು ಹೇಳಿದರು. ಅದು ತಪ್ಪು. ಎಂ. ಎಸ್. ಇ. ಬಿ. ಯವರು ಎಂ. ಪಿ. ಸಿ. ಯಿಂದ ಮೂರು ಪೈಸೆಯಂತೆ ಕೊಂಡುಕೊಳ್ಳುತ್ತಾರೆ. ಒಂದೊಂದಕ್ಕೆ ಒಂದೊಂದು ರೀತಿಯ ರೇಟ್ ಇರುವುದು ಸ್ವಾಭಾವಿಕ ಮತ್ತು ನ್ಯಾಯ. ಇದಕ್ಕೆ ಒಂದು ರೇಟ್ ಕಮಿಟಿ ಇದೆ.

(ಶ್ರೀ ಎಚ್. ಎಂ. ಚನ್ನಬಸಪ್ಪ)

ಅಕಮಿಟಿಯವರು ವರ್ಷಕ್ಕೊಂದು ಸಾರಿ ರೇಟ್ ಫಿಕ್ಸ್‌ಮಾಡುತ್ತಾರೆ. ಕೆಲವು ಅಗ್ರಿಮೆಂಟ್ಸ್ ಆಗಿರತಕ್ಕ ರೇಟ್ಸ್ ಉಂಟು. ವ್ಯವಸಾಯಕ್ಕೆ ಹೆಚ್ಚು ಸಹಾಯ ಮಾಡಬೇಕು ಎನ್ನುವ ತೀರ್ಮಾನವನ್ನು ಒಪ್ಪಿ ಅದರಂತೆ ರೇಟ್ಸ್ ಫಿಕ್ಸ್ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ರೇಟ್ ಬಗ್ಗೆ ಎಂ.ಪಿ.ಸಿ.ಯವರಿಗೆ ಎಷ್ಟು ಬೀಳುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ವ್ಯಾಪಾರ ಮಾಡಲಿಕ್ಕೆ ಅಲ್ಲ. ಒಟ್ಟು ಹಾಕಿರತಕ್ಕ ಬಂಡವಾಳ ಏನು ಇದೆ ಇದಕ್ಕೆ ಅವರು ಬಡ್ಡಿ ಕೊಡಬೇಕು. ಸಬ್ಜೆಕ್ಟು ಕರೆಕ್ಷನ್, ಅವರು 150 ಕೋಟಿ ರೂಪಾಯಿಗಳಿಗೆ ಬಡ್ಡಿ ಕೊಡಬೇಕು. ಇದನ್ನೆಲ್ಲಾ ಲೆಕ್ಕ ಹಾಕಿ ಅವರ 3 ಪೈಸೆಯನ್ನು ಫಿಕ್ಸ್‌ಮಾಡಿದ್ದಾರೆ. ಒಂದು ವೇಳೆ ಇದು ಹೆಚ್ಚು ಎನ್ನುವುದು ಇದ್ದರೆ ಕಡಿಮೆ ಮಾಡಬಹುದು. ಇದರ ಬಗ್ಗೆ ಯೋಚನೆ ಮಾಡುವುದಕ್ಕೆ ಅಡ್ಡಿ ಇಲ್ಲ. ನಾವು ಇದರಿಂದ ಲಾಭ ಮಾಡಬೇಕು ಎನ್ನುವ ಪ್ರಶ್ನೆಯಿಲ್ಲ ಎಂದು ತಮ್ಮಲ್ಲಿ ಅರಿಕೆಮಾಡುತ್ತೇನೆ. ರಿವರ್ ಬ್ಯಾಂಕ್ 182 ಕಿಲೋಮೀಟರ್‌ಅನ್ನು ಸುಮಾರು 16 ಲಕ್ಷ ರೂಪಾಯಿ ವೆಚ್ಚದಲ್ಲಿ ಕೇವಲ 18 ದಿವಸದೊಳಗೆ ಅಗತ್ಯ ಎಂದು ಹೇಳಿದ ಕೂಡಲೆ ಮಾಡಿದ್ದೇನೆ.

Sri H. D. DEVEGOWDA,—We will compliment the Officers and the Chairman.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ದಕ್ಷತೆಯನ್ನು ತೋರಿಸುತ್ತದೆಯೋ ಅಥವಾ ಅದ್ಯಕ್ಷತೆಯನ್ನು ತೋರಿಸುತ್ತದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ನಾವು ಒಪ್ಪುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪ.ಜೊತೆಗೆ 1965ರಿಂದ1971ರವರೆಗೆ ಇಷ್ಟುವರ್ಷಗಳಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ ವರ್ಷಕ್ಕೆ 130 ಹಳ್ಳಿಗಳಂತೆ ಸುಮಾರು 933 ಹಳ್ಳಿಗಳು ಆಗಿರುವುದು ಹೆಚ್ಚು. ಕಳೆದ ಎರಡು ವರ್ಷಗಳಲ್ಲಿ ಐದು ಸಾವಿರ ಹಳ್ಳಿಗಳ ಮೇಲ್ಪಟ್ಟು ವಿದ್ಯುಚ್ಛಕ್ತಿಯನ್ನು ಕೊಟ್ಟಿದೆ, ಇದು ದಕ್ಷತೆಯನ್ನು ತೋರಿಸುತ್ತದೆಯೇ, ಅದಕ್ಷತೆಯನ್ನು ತೋರಿಸುತ್ತದೆಯೇ ?

ಶ್ರೀ ಎಂ. ಎಸ್, ಕೃಷ್ಣನ್.—ನೀವು ಬಂದಮೇಲೆ ಎಷ್ಟು ಆಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಬಂದಮೇಲೆ, ನಾನು ಮತ್ತು ವಿದ್ಯುಚ್ಛಕ್ತಿ ಮಂಡಲಿ ಎರಡು ಭಾಗಗಳು. ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಬೇಗ ಬೇಗ ದೊರಕಿಸಬೇಕು ಎಂದು 1ಕೋಟಿ 66 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಎಲ್ಲಾಕಡೆಯಲ್ಲಿ 20 ಜಿಲ್ಲೆಗಳಿಗೆ ಸಬ್ ಟ್ರಾನ್ಸ್‌ಮಿಷನ್ ಲೈನ್ ಅನ್ನು ಎರಡು ವರ್ಷದಲ್ಲಿ ಪೂರೈಸಬೇಕು ಎಂದು ತೀರ್ಮಾನ ಮಾಡಿ ಸರ್ಕಾರದಿಂದ ನಾಳೆ ನಾಡಿದ್ದು ಆಜ್ಞೆ ಕೊಡುತ್ತೇವೆ ಮತ್ತು ಅದು ವಿದ್ಯುಚ್ಛಕ್ತಿಯ ವೇಗದಂತೆ ನಡೆಯುತ್ತದೆ ಎಂದು ನಾನು ಸ್ಪಷ್ಟವಾಗಿ ಭರವಸೆಯನ್ನು ಕೊಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ತಿಪಟೂರು ತಾಲ್ಲೂಕಿನಲ್ಲಿ ಒಂದು ಲೈನ್ ಕೂಡ ಎಳೆದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಂಡಿವಿಜುಯಲ್ ಕೇಸಸ್ ಎಲ್ಲೆಲ್ಲಿ ಅನಾವಶ್ಯಕವಾಗಿ ನಿಧಾನವಾಗಿದೆ ಎನ್ನತಕ್ಕಂಥದನ್ನು ನನ್ನ ಗಮನಕ್ಕೆ ತಂದರೆ ಸಾಧ್ಯವಾದಷ್ಟು ಪ್ರಯತ್ನಮಾಡಿ ಅದನ್ನು ಈಡೇರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಅಷ್ಟು ಭರವಸೆ ಕೊಡಬಲ್ಲೆ. ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿಗೆ ಅಂಡರ್‌ಗ್ರೌಂಡ್ ಕೇಬಲ್‌ನ್ನು ಹಾಕಿ ಈ ವಿದ್ಯುಚ್ಛಕ್ತಿ ಸರಬರಾಯಿ ದಕ್ಷತೆ ಹೆಚ್ಚಿಸುವುದಕ್ಕೋಸ್ಕರ ಎರಡೂವರೆ ಕೋಟಿ ರೂಪಾಯಿ ಹೆಚ್ಚದಲ್ಲಿ ಯೋಚನೆಗಳನ್ನು ತೆಗೆದುಕೊಂಡು ಈಗಾಗಲೇ ಬೆಂಗಳೂರು ಕೆಲಸ ನಡೆಯುತ್ತಾ ಇದೆ 55 ಸಬ್ ಸ್ಟೇಷನಗಳನ್ನು ಈಗಾಗಲೇ ಕೊಡಲಾಗಿದೆ. ಎಲ್ಲೆಲ್ಲಿ ವಿದ್ಯುಚ್ಛಕ್ತಿಯಲ್ಲಿ ಈ ಒಂದು ತೊಂದರೆ ಉಂಟಾಗುತ್ತಿದೆ ಲೋ ವೋಲ್ಟೇಜ್ ದೆಸೆಯಿಂದ ಅಲ್ಲಿಗೆ ಇವುಗಳನ್ನು ಕೊಡಬೇಕು ಎಂದು ವಿದ್ಯುಚ್ಛಕ್ತಿ ಮಂಡಲಿ ತೀರ್ಮಾನ ಮಾಡಿದೆ. ಜೊತೆಗೆ ಕ್ಯಾಷ್ ಕಲೆಕ್ಷನ್ ಸೆಂಟರ್ಸ್ ಜನರಿಗೆ ತೊಂದರೆಯಾಗುತ್ತದೆ ಎಂದು ಎಲ್ಲೆಲ್ಲಿ ಅವಶ್ಯಕವೋ ಅಲ್ಲಿಗೆ ಹೆಚ್ಚಿಗೆ ಮಾಡಿವೆ. ಬೆಂಗಳೂರಿನಲ್ಲಿ ಮನೆಮನೆಗೆ ಹೋಗಿ ಬಿಲ್‌ಮಾಡಿ ಕ್ಯಾಷ್ ಕಲೆಕ್ಷನ್ ಸೆಂಟರ್ಸ್ ಇಟ್ಟು ವಸೂಲು ಮಾಡುತ್ತಾರೆ. ಈ ಎಲ್ಲಾ ಕ್ರಮಗಳು ಬಹು ವೇಗದಲ್ಲಿ ತಮ್ಮಗಳ ಸೌಕರ್ಯಕ್ಕೋಸ್ಕರ ನಡೆಯುತ್ತಿದೆ, ಎಲೆಕ್ಟ್ರಿಸಿಟಿಬೋರ್ಡಿನವರು ತುಂಬಾ ದಕ್ಷತೆಯಿಂದ ಕೆಲಸಮಾಡುತ್ತಿದ್ದಾರೆ ಎಂಬುದನ್ನು ತಾವು ಒಪ್ಪಿಕೊಳ್ಳಬೇಕು. ಮತ್ತೆ ಈಗ ಮೈಸೂರು ಪವರ್ ಕಾರ್ಪೊರೇಷನ್ ಬಗ್ಗೆ ಮಾತನಾಡುತ್ತಾ ಈ ಪವರ್ ಕಾರ್ಪೊರೇಷನ್

ಏತಕ್ಕೆ ಮಾಡಬೇಕಿತ್ತು? ಇದು ಮಾಡತಕ್ಕ ಕೆಲಸಗಳನ್ನು ವಿದ್ಯುಚ್ಛಕ್ತಿ ಮಂಡಲಿಗೆ ಏಕೆ ವಹಿಸಬಾರದಾಗಿತ್ತು ಎಂದು ನಿನ್ನೆ ಹೇಳಿದರು. ನಾನು ಅಧಿಕಾರಕ್ಕೆ ಬಂದ ಕೂಡಲೇ ಇದನ್ನು ಯೋಚನೆ ಮಾಡಿದೆ, ಬಹುಶಃ ಪವರ್ ಕಾರ್ಪೊರೇಷನ್ ಮಾಡಬೇಕು ಎನ್ನುವ ತೀರ್ಮಾನ ತೆಗೆದುಕೊಂಡಿರುವವುದು ಸ್ವಲ್ಪ ಬುದ್ಧಿ ಉಪಯೋಗವಾಡಿ, ಒಳ್ಳೆಯ ತೀರ್ಮಾನವನ್ನೇ ಮಾಡಿದ್ದಾರೆ ಎಂದು ಅಷ್ಟು ನನ್ನ ಮನಸ್ಸಿಗೆ ಅನ್ನಿಸಿತು.

ಶ್ರೀ ಎಚ್. ಡಿ. ದೇವೇಗೌಡ.—ಅಂತೂ ಕಾಂಪ್ಲಿಮೆಂಟ್ ಮಾಡಿದಿರಿ ಅಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾರಾದರೂ ಆಗಲಿ ವಿದ್ಯುಚ್ಛಕ್ತಿ ಮಂಡಲಿ ಕಾರ್ಯಕ್ಷೇತ್ರ ದಿನೇದಿನೇ ವಿಶೇಷವಾದ ರೀತಿಯಲ್ಲಿ ಬೆಳೆದುಬಿಟ್ಟಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ದೇಹ ಬೆಳೆಯುತ್ತಾ ಇದೆ. ಬುದ್ಧಿ ಬೆಳೆದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಬುದ್ಧಿ ಬೆಳೆಯದೆ ಇಷ್ಟು ಕೆಲಸ ಮಾಡುತ್ತಾ ಇರಲಿಲ್ಲ. ಇದರ ಜೊತೆಗೆ ಬೃಹದಾಕಾರವಾದ ಯೋಜನೆಯನ್ನು ಕೈಕೊಂಡು ಎರಡು ಕೆಲಸಗಳನ್ನು ಏಕ ಕಾಲದಲ್ಲಿ ಮಾಡುವುದರಿಂದ ದಕ್ಷತೆ ಕಡಿಮೆಯಾಗುತ್ತದೆ. ಆದ್ದರಿಂದ ಈ ನೀತಿಯನ್ನು ಗಮನಕ್ಕೆ ತಂದರೆ ಎಲ್ಲರೂ ಒಪ್ಪಬೇಕು. ಹಿಂದೆ ಎಚ್.ಇ.ಸಿ.ಪಿ. ಬೋರ್ಡ್ ಇದನ್ನು ಮಾಡುತ್ತಿತ್ತು, ಆಗಲೂ ವಿದ್ಯುಚ್ಛಕ್ತಿ ಮಂಡಲಿ ಇತ್ತು. ಎಚ್.ಇ.ಸಿ.ಪಿ. ಡಿಸಾಲ್ವ್ ಆದಮೇಲೆ ಅದರ ಸ್ಥಳದಲ್ಲಿ ಎಂ.ಪಿ.ಸಿ. ಬಂತು. ಆದುದರಿಂದ ಎರಡು ಕೆಲಸಗಳನ್ನು ಸಮನ್ವಯ ಮಾಡುವುದರಿಂದ ದಕ್ಷತೆ ಹೆಚ್ಚುವ ಬದಲು ಕಡಿಮೆಯಾಗುತ್ತದೆ, ಪ್ರಗತಿ ಹೆಚ್ಚುವ ಬದಲು ಕಡಿಮೆಯಾಗುತ್ತದೆಂದು ಹೇಳಿ ಒಳ್ಳೆಯ ತೀರ್ಮಾನವನ್ನು ಅವರು ತೆಗೆದುಕೊಂಡಿದ್ದಾರೆ. ಮತ್ತೊಂದು ವಿಷಯ ಕೇಳಿದರು. ದೊಡ್ಡ ವಿದ್ಯುತ್ ಕಾರ್ಯ ತೆಗೆದುಕೊಳ್ಳಬೇಕಾದರೆ ಕೋಟಿಗಟ್ಟಲೆ ಹಣಬೇಕಾಗುತ್ತದೆ. ಪ್ಲಾನ್ ಒಳಗೆ ಕೆಲಸಮಾಡಬೇಕಾದರೆ ಇನ್ನೊಬ್ಬರ ಕೈಯೊಳಗೆ ಸಿಕ್ಕಿ ನರಳಬೇಕಾಗುತ್ತದೆ, 10 ವರ್ಷಗಳಾದರೂ ಹಣಸಿಕ್ಕುವುದು ಕಷ್ಟ. ಅದಕ್ಕೋಸ್ಕರವಾಗಿ ಕಾರ್ಪೊರೇಷನ್ ಏರ್ಪಾಡು ಮಾಡಿ ಹಣ ಕೊಡತಕ್ಕ ಸಂಸ್ಥೆಗಳ ಸಹಾಯವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿದೆವು. ಮಾಡಿದಮೇಲೆ ಇದರ ಅವಶ್ಯಕತೆ ಇದೆ ಎಂದು ತಕ್ಷಣ ಕೇಂದ್ರ ಸರ್ಕಾರದವರು ಮುಂದೆ ಬಂದು ಸಹಾಯವನ್ನು ಕೊಡುತ್ತೇವೆ ಎಂದು ಅಶ್ಯೂರೆನ್ಸ್ ಕೊಟ್ಟರು. ಪ್ಲಾನಿನ ಹೊರಗೆ ಮಾಡುವುದಕ್ಕೆ ಆಗಲಿಲ್ಲ ಪ್ಲಾನಿನ ಒಳಗಡೆ ಮಾಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಬೇರೆ ರಾಜ್ಯದವರಿಗೆ ಈ ಕಾರ್ಪೊರೇಷನ್ ಇಲ್ಲದೆ ಹಣ ಸಹಾಯವನ್ನು ಕೊಟ್ಟಿದ್ದಾರೆ, ಅದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್ ಎಂ. ಚನ್ನಬಸಪ್ಪ.—ನಮಗೂ ಕೊಟ್ಟಿದ್ದಾರೆ ?

ಶ್ರೀ ಎಂ. ಎಸ್. ಕೃಷ್ಣನ್,—ಹಾಗಾದರೆ ಕಾರ್ಪೊರೇಷನ್ ಬಂದುದರಿಂದ ಹಾಗೆ ಆಯಿತು ಎಂದು ಹೇಳುವುದು ಸಮಂಜಸವಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಅಧಿಕಾರದಲ್ಲಿ ಇದ್ದಾಗ ಕಾಳಿನದಿಗೆ ಹಣಬೇಕು, ಪ್ಲಾನಿನ ಒಳಗೆ ಜಾಸ್ತಿಮಾಡಿ ಬ್ಯಾಂಕಿಗೆ ಹಣ ಕೊಡಿ ಎಂದು ಎಲ್ಲಾ ವ್ಯವಸ್ಥೆ ಮಾಡಿದಮೇಲೆ ನಮ್ಮ ಹತೋಟಿ ಮೀರಿಹೋಗುತ್ತದೆ ಎಂದು ನಾವೇ ಕೊಡುತ್ತೇವೆ ಎಂದು ಮುಂದೆ ಬಂದರು. ಅದನ್ನು ಸ್ಪಷ್ಟಪಡಿಸುತ್ತೇನೆ. 13ವರೆ ಕೋಟಿ ರೂಪಾಯಿ ಕೊಟ್ಟರು ಅದು 31-3-1973ರ ಒಳಗೆ ಖರ್ಚಾಗಿದೆ ಎಂದು ಸಂತೋಷದಿಂದ ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಶರಾವತಿ ಕಟ್ಟಬೇಕಾದರೆ ಯಾರು ಹಣ ಕೊಟ್ಟರು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರೇ ಕೊಟ್ಟಿದ್ದು, ಅದು 12 ವರ್ಷಗಳಿಂದ ನಡೆದಿದೆ. ಇನ್ನು ನಡೆಯುತ್ತಾ ಇದೆ, ಎರಡು ಯೂನಿಟ್ಸ್ ಆಗಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಪವರ್ ಕಾರ್ಪೊರೇಷನ್ ಮಾಡಿದ್ದರಿಂದ ಕೊಟ್ಟರು ಎಂದು ಹೇಳುತ್ತಿದ್ದೀರಿ ?

Sri H. M. CHANNABASAPPA.—I told the Government of India that if you are not prepared to advance us, well we will go to public borrowings. ಆಗ ಅವರಿಗೆ ಒಂದು ಕಷ್ಟ ಬರುತ್ತದೆ. ಪಬ್ಲಿಕ್ ಬಾರೋಯಿಂಗ್ಸ್‌ಗೆ ಹೋದರೆ ಆಗ ಅವರ ಪ್ಲಾನಿಗೆ ಹಣ ಬ್ಯಾಂಕುಗಳು ಕೊಡಬೇಕು. ಎಲ್ಲಾ ಅವರ ಹತೋಟಿ ಮಿತಿ ಮೀರಿಹೋಗುತ್ತದೆ ಎಂದು ಅವರು ಹಣ ಕೊಡಲಿಕ್ಕೆ ಒಪ್ಪಿಕೊಂಡರು ಎಂದು ನನ್ನ ಮನಸ್ಸಿಗೆ ಅನ್ನಿಸಿರತಕ್ಕ ಅಭಿಪ್ರಾಯ.

ಶ್ರೀ ಕಾಗೋಡು ತಿಮ್ಮಪ್ಪ.—ಇನ್‌ಸ್ಟಿಟ್ಯೂಷನ್ ಮುಖಾಂತರ ಬಾರೋ ಮಾಡಿದರೆ ಕೇಂದ್ರ ಸರ್ಕಾರದ ಅನುಮತಿ ಬೇಡವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೇಂದ್ರಸರ್ಕಾರಕ್ಕೆ ಒಂದು ತೊಂದರೆ ಬರುತ್ತದೆ. Planning commission will have to take note of all the available sources in all the Banks and financial institutions. When the Banks come forward to finance us to that extent their calculations will be upset. I will discuss with you if you want to be convinced about this aspect. ಈ ಎರಡು ಕಾರ್ಯಗಳಿಗೋಸ್ಕರ ಎಂ.ಪಿ.ಸಿ. ಇರತಕ್ಕದ್ದು ಒಳ್ಳೆಯದು. ಎಂ.ಎಸ್.ಇ.ಬಿ.ಗೆ ಕೊಟ್ಟು ಅವರಿಗೆ ಇರತಕ್ಕ ಕಾರ್ಯದ ಜೊತೆಗೆ ಇದನ್ನು ಹೊರಿಸಿದರೆ ಎಷ್ಟರಮಟ್ಟಿಗೆ ಕಾರ್ಯ ಸಾಧನೆಯಾಗುತ್ತದೆ ಎಂಬುದನ್ನು ಯೋಚನೆ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್ —ಎಂ.ಎಸ್.ಇ.ಬಿ.ಯಲ್ಲಿರುವ ಇಂಜನಿಯರ್‌ಗಳೇ ಎಂ.ಪಿ.ಸಿ. ಯಲ್ಲಿ ಇರುವುದು. ಅವರೇ ಕೆಲಸಮಾಡುವುದು.

Sri H.M.CHANNABASAPPA—Engineers may be the same. But they are under different control ; powers have been decentralised and their powers are also different. ಮತ್ತೆ ಎಸ್ಟಿಮೇಟ್ಸ್, ಡ್ರಾಫ್ಟ್ಸ್ ಯಾವ ಕಾಲದಲ್ಲಿ ಬೇಕು ಎಂದರೆ ಆಗ ಕೂತುಕೊಂಡು ತೀರ್ಮಾನ ತೆಗೆದುಕೊಳ್ಳಬಹುದು. ಇದು ಆಕ್ಟ್ ಪ್ರಕಾರ ಕೆಲಸ ಮಾಡಬೇಕು. ಎಂ.ಎಸ್.ಇ.ಬಿ.ಯಲ್ಲಿ ಕೆಲವು ಡಿಫೆಕ್ಟ್ಸ್ ಇವೆ. I have no objection to discuss with you and convince you.

Sri M. S. KRISHNAN.—Has not the cost of electricity increased because of the setting up of this Corporaton ?

Sri H. M. CHANNABASAPPA.—Either I should carry conviction to you or get convinced with your arguments. Anyway, I have given you the broad outline as to why I have welcomed the creation of this power Corporation.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಮೇಲ್ವಿಚಾರಣೆಗೆ ತಜ್ಞರು ಏತಕ್ಕೆ ಇರಬಾರದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೈಸೂರು ಪವರ್ ಕಾರ್ಪೊರೇಷನ್‌ಗೆ ಮಿನಿಷ್ಟರು ಏತಕ್ಕೆ ಚೇರ್‌ಮನ್ ಆದರು ಎಂದು ಪ್ರಶ್ನೆ ಮಾಡಿದರು. I am not anxious to be the Chairman. I might make it very p'ain. ಇರತಕ್ಕ ಕೆಲಸದ ಹೊರೆಗೆ ಮತ್ತಷ್ಟು ಕೆಲಸ ಹೇರಿಕೊಳ್ಳಬೇಕು ಎನ್ನುವ ಇಚ್ಛೆ ಇಲ್ಲ. ಇದನ್ನು ಏತಕ್ಕೋಸ್ಕರ ನಾನು ತಿಳಿಸುತ್ತಿದ್ದೇನೆಂದರೆ ...

Sri H. D. DEVE GOWDA.—The present Ministry had adopted this new strategy that Ministers should not accept the Chairmanship of any Corporations. But day before yesterday the Forest Industrial Development Corporation was inaugurated in our State, for which also; the Miniser concerned is the Chairman. ಸ್ಟ್ಯಾಚುಟರಿ ಬಾಡೀಸ್ ಮಾಡತಕ್ಕ ಉದ್ದಿಶ್ಯ ಅದಕ್ಕೆ ತಜ್ಞರು, ಆಡಳಿತದಲ್ಲಿ ಅನುಭವ ಇರತಕ್ಕವರು ಇರುವುದು ಒಳ್ಳೆಯದು ಎಂದು. I am not questioning the integrity of the Minister now. ಕೆಲವು ಸಾರಿ ಸ್ಟ್ಯಾಚುಟರಿ ಬಾಡಿಗೆ ಅಧ್ಯಕ್ಷರು ಆಗಿದ್ದರೆ ಅವರಿಗೆ ಮೇಯುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಸ್ಟ್ಯಾಟ್ಯೂಟರಿ ಬೋರ್ಡ್ ಬಗ್ಗೆ ಹೇಳಬೇಕಾದರೆ ಎಲ್ಲಾ ಕಾರ್ಪೊರೇಷನ್ಸ್‌ಗೂ ಒಂದೊಂದಕ್ಕೆ ಒಬ್ಬೊಬ್ಬರು ಮಂತ್ರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿಬಿಡಿರಿ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈಗ ಈ ಬೋರ್ಡ್ ಬಗ್ಗೆ ಹೇಳುತ್ತೇನೆ. ದಯವಿಟ್ಟು ಸಾವಧಾನವಾಗಿ ಕೇಳಿ. ಮೈಸೂರು ಪವರ್ ಕಾರ್ಪೊರೇಷನ್ ಫಾರಂ ಆದಾಗ ಆಗಿನ ವಿದ್ಯುಚ್ಛಕ್ತಿ ಮಂತ್ರಿಗಳು ಯಾರು ಆಗಿದ್ದರೋ ಅವರೇ ಇದರ ಅಧ್ಯಕ್ಷರಾಗಿದ್ದರು.

Sri H. D DEVEGOWDA.—Find a suitable man.

Sri H. M. CHANNABASAPPA.—I do not want to question any body's *bona fides* nor I allow others to question my *bona fides* when I am perfect.

ಶ್ರೀ ಕೋಣಂದೂರು ಲಿಂಗಪ್ಪ.—ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ ಎಂಬಂತೆ ಆಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಸರಿಯಲ್ಲ. ಬೇಡ ಎಂದರೆ ಬದಲಾವಣೆ ಮಾಡೋಣ. ಈವೊತ್ತಿನವರೆಗೂ ಕೂಡ I want to take you into my confidence. If I cannot carry conviction and if you convince me, I have no objection to change it. My mind is open.

ಶ್ರೀ ಕಾಗೋಡು ತಿಮ್ಮಪ್ಪ.—ಒಬ್ಬರು ತಜ್ಞರು ಚೀಫ್ ಇಂಜಿನೀಯರ್ ಅಲ್ಲೇ ಇದ್ದಾಗ ಇವರನ್ನು ಏತಕ್ಕೆ ಮಾಡಿದರು ?

ಶ್ರೀ ಹೆಚ್. ಎಂ. ಚನ್ನಬಸಪ್ಪ.— ಹಿಂದಿನ ಸರ್ಕಾರ ರಾಜೀನಾಮೆ ಕೊಟ್ಟ ಮೇಲೆ ಗೌವರ್ನರ್ ಕಾಲದಲ್ಲಿ ಇವರನ್ನು ನೇಮಕ ಮಾಡಿದರು. ನಾನು ಯಾವುದನ್ನೂ ಮುಚ್ಚಿಡುವುದಿಲ್ಲ. ತಪ್ಪು ಇದ್ದರೆ ತಪ್ಪು ಎಂದು ಹೇಳುತ್ತೇನೆ, ಸರಿ ಇದ್ದರೆ ಸರಿ ಎಂದು ಹೇಳುತ್ತೇನೆ.

ಇನ್ನು ಎಂ. ಎಸ್. ಇ. ಬಿ. ಛೇರ್ಮನ್ ಆಗತಕ್ಕಂಥಾದ್ದಕ್ಕೂ, ಎಂ. ಪಿ. ಸಿ. ಗೆ ಛೇರ್ಮನ್ ಆಗತಕ್ಕಂಥಾದ್ದಕ್ಕೂ ವ್ಯತ್ಯಾಸ ಇದೆ. M· P. C. functions under the Company's Act; Board of Directors make the final decisions ; it is not controlled by any Act just as M. S. E. B. ಸರ್ಕಾರ ಏನು ಇದ್ದರೂ ಕೂಡ ಈ ಮ್ಯಾನೇಜಿಂಗ್ ಡೈರಕ್ಟರ್ಸ್ ಏನು ಇದ್ದಾರೆ ಅವರ ಮುಖಾಂತರವೇ ತಮ್ಮ ಅಭಿಪ್ರಾಯಗಳನ್ನು ಸೂಚನೆ ಮಾಡಬೇಕೇ ವಿನಾ ಸರ್ಕಾರ ಅದಕ್ಕೆ ಡೈರೆಕ್ಷನ್ ಕೊಡುವುದಕ್ಕಾಗುವುದಿಲ್ಲ. ಅದನ್ನು ತಾವು ತಿಳಿದುಕೊಳ್ಳಬೇಕು. ನಾಳೆ ದಿವಸ ಬೋರ್ಡ್ ಆಫ್ ಡೈರೆಕ್ಟರ್ಸ್ ಏನು ತೀರ್ಮಾನ ತೆಗೆದು ಕೊಳ್ಳುತ್ತಾರೋ ಅದು ಸರ್ಕಾರಕ್ಕೆ ಇಚ್ಛೆ ಇಲ್ಲದಿದ್ದರೆ ಸರ್ಕಾರ ಅದರ ಬಗ್ಗೆ ಹೇಳುವುದು ಕಷ್ಟ. ಎಂ. ಎಸ್. ಇ. ಬಿ. ಆದರೆ ಅದು ಆಕ್ಟ್ ಮೇಲೆ ಇದೆ. ಅದರ ಬಗ್ಗೆ ಅಧಿಕಾರ ಇದೆ. ಅಲ್ಲಿರುವ ಮ್ಯಾನೇಜಿಂಗ್ ಡೈರಕ್ಟರ್ಸ್ ಏನಾದರೂ ತೀರ್ಮಾನ ತೆಗೆದುಕೊಂಡರೆ ಅದನ್ನು ಹೊಸದಾಗಿ ನಾವುಏನೂ ಮಾಡುವುದಕ್ಕಾಗುವುದಿಲ್ಲ. The Chairman has nothing to say. The Managing Director is the complete authority to implement the decisions of the Board. But the Government will have to keep a watch over it because the Government has invested crores of rupees and is going to stand guarantee for loans etc' ಅದಕ್ಕೋಸ್ಕರವಾಗಿ ಬಹಳ ಬುದ್ಧಿವಂತಿಕೆ ಉಪಯೋಗಿಸಿ ಮಂತ್ರಿಗಳೇ ಅಧ್ಯಕ್ಷರಾಗಿದ್ದರು. ಅದನ್ನು ತಪ್ಪು ಎಂದು ನಾನು ಹೇಳುವುದಿಲ್ಲ. ಹಿಂದಿನ ಸರ್ಕಾರ ರಾಜೀನಾಮೆ ಕೊಟ್ಟು ಹೋದ ಮೇಲೆ ಗೌರ್ನರ್ ಕಾಲದಲ್ಲಿ ಒಬ್ಬರು ತಜ್ಞರನ್ನು ನೇಮಕ ಮಾಡಿದರು. ನಾವು ನಿರೀಕ್ಷಿಸಿದಂತೆ ಅಲ್ಲಿ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡುವುದಕ್ಕೆ ಕಷ್ಟ ಬಂದೀತು ಎಂದು ಆವಾಗ ಇದನ್ನೆಲ್ಲಾ ವಿಚಾರ ಮಾಡಿದೆವು. ಆ ಬೋರ್ಡ್‌ನಲ್ಲಿ ಡೈರೆಕ್ಟರ್ಸ್ ಕೆಲವರು ನಾನ್ ಅಫಿಷಿಯಲ್ಸ್ ಇದ್ದಾರೆ. ಅವರು ತೆಗೆದುಕೊಂಡ ತೀರ್ಮಾನ ಏನಾದರೂ ಸರ್ಕಾರಕ್ಕೆ ಸರಿಯಿಲ್ಲ ಎಂದು ಕಂಡು ಬಂದರೆ ಮಾರ್ಪಾಡು ಮಾಡುವುದು ಕಷ್ಟ. ಈ ದೃಷ್ಟಿಯಿಂದ ಸರ್ಕಾರದ ರೆಪ್ರೆಸೆಂಟೇಟೀವ್ಸ್ ಯಾರು ಇದ್ದಾರೋ ಅವರೇ ಅಧ್ಯಕ್ಷರಾಗಿರತಕ್ಕದ್ದು ಉಚಿತ ಎಂದು ತಿಳಿದು ಅವರೇ ಅಧ್ಯಕ್ಷರಾದರು. ಅಷ್ಟೇ ವಿನಾ ಅದಕ್ಕೆ ನಾನು ಅಧ್ಯಕ್ಷನಾಗಿರಬೇಕು ಎಂಬ ಕನಸು ಮನಸು ಇರಲಿಲ್ಲ. ಈ ವಿಚಾರದಲ್ಲಿ ಬೇಡ ಅನ್ನುವುದಾದರೆ ಇವಾಗಲೇ ಬಿಟ್ಟುಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿರತಕ್ಕಂಥ ಚೀಫ್ ಇಂಜಿನಿಯರನ್ನೇ ಏತಕ್ಕೆ ಅಲ್ಲಿ ಮ್ಯಾನೇಜ್‌ಮೆಂಟ್‌ಗೆ ಹಾಕಬಾರದು ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಆ ವಿಚಾರದ ಬಗ್ಗೆ ಬೇಕಾದರೆ ಹೇಳುತ್ತೇವೆ. The Managing Director is the sole authority; he has to implement the decisions of the Board. He cannot implement the decisions of the Government; he can only implement the decisions of the Board of Directors. On technical matters Chief Engineer is the sole authority. There is a Technical Committee of Experts. Today I have ordered that the Technical Committee may be expanded and the members of the CWPC are going to be there. On Technical matters, no non-official will be associated.

ಶ್ರೀ ಕಾಗೋಡು ತಿಮ್ಮಪ್ಪ.—ಮಂತ್ರಿಗಳು ನಾನ್ ಟೆಕ್ನಿಕಲ್ ಆದ್ದರಿಂದ ಅವರನ್ನೂ ಅದಕ್ಕೆ ಹಾಕಬೇಕಾಗಿಲ್ಲ.

Sri H. M. CHANNABASAPPA.—The Managing Director has nothing to do with technical matters. He is there only to implement the administrative matters.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಅಲ್ಲಿ ಐ. ಎ. ಎಸ್. ಆಫೀಸರನ್ನು ನೇಮಕ ಮಾಡಿದ್ದಾರೆ, ಅವರ ಕೈಕೆಳಗೆ ಒಬ್ಬರು ತಾಂತ್ರಿಕ ಪರಿಣತರು ಕೆಲಸ ಮಾಡುವುದಕ್ಕಾಗುವುದಿಲ್ಲವೇ ?

Sri H. M. CHANNABASAPPA.—The Managing Director has nothing to do with the technical aspect. ಇನ್ನು ರೋಡ್ಸ್ ವಿಷಯ.

Sri H. D. DEVE GOWDA.—What happened to the two units of Sharavati ?

ಶ್ರೀ ಎಚ್. ಎಂ. ಚನ್ನಬಸಪ್ಪ.—The two units of Sharavati arrive on schedule. ಇದು 1967 ರಲ್ಲೇ ಕಮೀಷನ್ ಆಗಬೇಕಾಗಿತ್ತು. ಆಗಲಿಲ್ಲ. ಈಗ ಆ ಕೆಲಸ ಪ್ರಾರಂಭವಾಗಿದೆ. ನಾವು ಯಾವ ಕಾಲಕ್ಕೆ ಎಂದು ಫಿಕ್ಸ್ ಮಾಡುತ್ತೇವೋ ಆಕಾಲಕ್ಕೆ ಬರುತ್ತದೆ. ಮೊದಲು ಎಂ. ಪಿ. ಸಿ. ಯವರು ಈ ಕಾಳೀ ನದಿ ಪ್ರಾಜೆಕ್ಟ್ ಕೆಲಸವನ್ನು ಎರಡು ಫೇಸ್‌ನಲ್ಲಿ ಮಾಡಬೇಕೆಂದಿದ್ದುದನ್ನು ಈವೊತ್ತು ಅದನ್ನು ಒಂದೇ ಸ್ಟೇಜ್‌ನಲ್ಲಿ ಮಾಡಬೇಕು ಎಂದು ಸರ್ಕಾರದವರು ನಿರ್ಧಾರ ಮಾಡಿದ್ದಾರೆ. ಇದಕ್ಕೆ ಗೌರ್ನ್‌ಮೆಂಟ್ ಆಫ್ ಇಂಡಿಯಾದವರ ಆಶೀರ್ವಾದವೂ ಇದೆ. ಮೊದಲು 3 ಯೂನಿಟ್ಸ್‌ಗೆ ಎಂದು ಆರ್ಡರ್ ಪ್ಲೇಸ್ ಮಾಡಿತ್ತು. ಈಗ 6 ಯೂನಿಟ್ಸ್ ಕೂಡ ಏಕ ಕಾಲದಲ್ಲಿ ಪ್ರಾರಂಭವಾಗುತ್ತದೆ. ಇದಕ್ಕಾಗಿ ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀಮಾನ್ ಟಿ. ಎ. ಪೈ ಅವರೊಂದಿಗೆ ಚರ್ಚೆ ಮಾಡಿದ ಮೇಲೆ, ಇದನ್ನು ಏಕಕಾಲಕ್ಕೆ ಪ್ರಾರಂಭ ಮಾಡಬೇಕು ಎಂದು ಹೇಳಿದ ಮೇಲೆ, ಅವರೂ ಕೂಡ ಇದಕ್ಕೆ ಸಹಾಯ ಮಾಡಿದ ಮೇಲೆ ಈವೊತ್ತು 6 ಯೂನಿಟ್ಸ್‌ಗೆ ಮಾರ್ಚ 31 ರೊಳಗೆ ಆರ್ಡರ್ ಪ್ಲೇಸ್ ಮಾಡಿದ್ದಾರೆ.

ಇನ್ನು ಸೂಪ ಡ್ಯಾಮ್ ಏನು ಇದೆ ಅದಕ್ಕೂ ಕೂಡ ಬೇಕಾಗಿರತಕ್ಕಂಥ ಆರ್ಡರ್ಸನ್ನು ಪ್ಲೇಸ್ ಮಾಡಿದ್ದಾರೆ.

ಇನ್ನು ಲಿಂಗನಮಕ್ಕಿ ಡ್ಯಾಮ್‌ಗೆ ಬೇಕಾಗಿರತಕ್ಕ ಮೆಷಿನರಿ ಮತ್ತು ಅದಕ್ಕೆ ಬೇಕಾಗಿರತಕ್ಕಂಥ ಕ್ಲಿಯರೆನ್ಸ್, ಫಾರಿನ್ ಕ್ಲಿಯರೆನ್ಸ್ ಕೂಡ ಆಗಿಹೋಗಿದೆ. ಈಗ ಅದರ ಕೆಲಸ ಪ್ರಾರಂಭವಾಗಿದೆ. ಆ ಕೆಲಸಕಾರ್ಯಗಳೆಲ್ಲವೂ ಕೂಡ ನಾವು ನಿರೀಕ್ಷಿಸಿದ ಮಟ್ಟದಲ್ಲಿ, ನಿರೀಕ್ಷಿಸಿದ ವೇಗದಲ್ಲಿ ಏನು ಮಾಡಿದ್ದೇವೋ ಅದಕ್ಕಿಂತಲೂ ಮಿಂಚಿನ ವೇಗದಲ್ಲ ಕೆಲಸ ಆಗುತ್ತದೆ ಎಂದು ನಾನು ಹೇಳಬಯಸುತ್ತೇವೆ.

10–30 A.M.

ಶ್ರೀ ಎಂ. ಎಸ್. ಕೃಷ್ಣನ್.— ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮಿನಲ್ಲಿ ಸಹಕಾರ ಸಂಸ್ಥೆಗಳ ಮೂಲಕ ಎಲೆಕ್ಟ್ರಿಫಿಕೇಷನ್ ಮಾಡಿಸಬೇಕು ಎಂದು ಶುರು ಮಾಡಿದ್ದಾರೆ. ಇದರಿಂದ ವೆಸ್ಟೆಡ್ ಇಂಟರೆಸ್ಟ್ಸ್ ಹೆಚ್ಚಾಗುವುದರಿಂದ ಈ ರೀತಿ ಮಾಡಿರುವುದು ಸರಿ ಎಂದು ಹೇಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಇಂಡಿವಿಜುಯಲ್ಸ್‌ಗೆ ವಿದ್ಯುಚ್ಛಕ್ತಿ ಏನು ಕೊಡುತ್ತೇವೆ ಅದೇ ರೀತಿ ಸಂಸ್ಥೆಗಳಿಗೂ ಕೊಡತಕ್ಕದ್ದರಲ್ಲಿ ತಪ್ಪಿಲ್ಲ. ಆ ಸೊಸೈಟಿಯು ಬೈಲಾಗಳಲ್ಲಿ ಎಕ್ಸ್‌ಪ್ಲಾಯಿಟೇಷನ್ನಿಗೆ ಅವಕಾಶವಿಲ್ಲದಂತೆ ನೋಡಿಕೊಂಡು ಒಂದು ವೇಳೆ ಅದಕ್ಕೆ ಏನಾದರೂ ವ್ಯತಿರಿಕ್ತವಾಗಿದ್ದರೆ ಅವಾಗ ಕಟ್ ಆಫ್ ಮಾಡತಕ್ಕದ್ದು ಇದ್ದೇ ಇದೆ. When it is declared that co-operative societies are vested interests, then I am going to abolish it.

ಶ್ರೀ ಕೋಣಂದರೂ ಲಿಂಗಪ್ಪ.—ಶರಾವತಿ ಹುಟ್ಟುವ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮತ್ತು ವಿದ್ಯುತ್ ಕೊಡತಕ್ಕ ಸಾಗರ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿಯನ್ನು ಕೊಟ್ಟಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಆದ್ಯತೆಯನ್ನು ಕೊಡಬೇಕೆಂದು ಸಬ್ ಟ್ರಾನ್ಸ್‌ಮಿಷನ್ ಲೈನ್ ಎಳೆಯುತ್ತಿದ್ದೇವೆ. ಆ ಕೆಲಸ ಮುಗಿದ ಕೂಡಲೇ ವಿದ್ಯುಚ್ಛಕ್ತಿಯನ್ನು ಎಲ್ಲರಿಗೂ ಕೊಡುತ್ತೇವೆ.

ರಸ್ತೆಗಳ ವಿಷಯ. ರಸ್ತೆ ಡಿಪಾರ್ಟ್‌ಮೆಂಟ್ ಬಹಳ ವೇಗದಲ್ಲಿ ಬೆಳೆದಿದೆ. ರಸ್ತೆಗಳು ಅಲ್ಲಿ ಕೆಟ್ಟಿದ್ದಾವೆ, ಇಲ್ಲಿ ಕೆಟ್ಟಿದ್ದಾವೆ ಎಂದು ಎಲ್ಲರೂ ಕೂಡ ಬಹಳ ಕಂಪ್ಲೇಂಟ್ ಮಾಡಿದ್ದಾರೆ. ರಸ್ತೆಗಳ ವಿಷಯ ಹೇಳುವಾಗ ಮೊದಲು ನಾನು ರೂರಲ್ ಕಮ್ಯೂನಿಕೇಷನ್ ರಸ್ತೆಗಳನ್ನು ತೆಗೆದುಕೊಳ್ಳುತ್ತೇನೆ. ಸಭೆಯಲ್ಲಿ ಎಲ್ಲಾ ಏನೂ ಕೆಲಸವಾಗಿಲ್ಲ, ಏನೂ ಕೆಲಸವಾಗಿಲ್ಲ ಎಂದು ಹೇಳುವವರೇ. ಇದನ್ನು ಕೇಳಿ ನನಗೆ ಆಶ್ಚರ್ಯವಾಯಿತು, ಆದರೆ ನಾನು ಅಂಕಿ ಅಂಶಗಳನ್ನು ತೆಗೆದು ನೋಡಿದರೆ ಕೆಲಸ ಎಲ್ಲ ಕಡೆಯೂ ಆಗಿದೆ, ಆದರೆ ಮಾನ್ಯ ಸದಸ್ಯರು ನಿರೀಕ್ಷಿಸಿದಷ್ಟು ಮಟ್ಟದಲ್ಲಿ ಆಗದೆ ಇರಬಹುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹಳೇ ಮೈಸೂರು ಭಾಗದಲ್ಲಿ ರಸ್ತೆಗಳ ಕೆಲಸ, ಮೈನರ್ ಇರಿಗೇಷನ್ ಕೆಲಸ ಎಲ್ಲಿಯೂ ಆಗಿಲ್ಲ, ಹಳೇ ಮೈಸೂರು ಭಾಗಕ್ಕೆ ಅನ್ಯಾಯವಾಗಿದೆ, ಹಿಂದಿನ ಸಾಲುಗಳಿಗೆ ಹೋಲಿಸಿ ನೋಡಿದರೆ ಈ ಸಾರಿ ಬಹಳ ಕಡಮೆ ಎನ್ನುವ ಆರೋಪವಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಚಾರದಲ್ಲಿ ಅನ್ಯಾಯವಾಗಿಲ್ಲ, ಆಗಬೇಕಾದಷ್ಟು ಕೆಲಸವಾಗಿಲ್ಲ, ಇನ್ನೂ ಆಗಬೇಕು ಎಂದರೆ ಅದು ಬೇರೆ ಮಾತು. ಈ ವಿಚಾರದಲ್ಲಿ ಬೆಂಗಳೂರು ಜಿಲ್ಲೆಯಲ್ಲಿ 7,41,000 ರೂಪಾಯಿ, ತುಮಕೂರು ಜಿಲ್ಲೆಯಲ್ಲಿ 19,00,000 ರೂಪಾಯಿ, ಕೋಲಾರ ಜಿಲ್ಲೆಯಲ್ಲಿ 19,57,000 ರೂಪಾಯಿ, ಮೈಸೂರು ಜಿಲ್ಲೆಯಲ್ಲಿ 3,92,000 ರೂಪಾಯಿ, ಶಿವಮೊಗ್ಗ ಜಿಲ್ಲೆಯಲ್ಲಿ 9,55,000 ರೂಪಾಯಿ, ಚಿತ್ರದುರ್ಗ ಜಿಲ್ಲೆಯಲ್ಲಿ 15,18,000 ರೂಪಾಯಿ ಈ ರೀತಿ ಖರ್ಚು ಮಾಡಿದ್ದೇವೆ. 64 ಫ್ಯಾಮಿನ್ ಮತ್ತು ಸಿ. ಎಸ್. ಆರ್. ಇ. ಇವೆರಡನ್ನೂ ಬಿಟ್ಟು ರೂರಲ್ ಕಮ್ಯೂನಿಕೇಷನ್ಸ್‌ಗೆ ಒಟ್ಟು 1,96,00,000 ರೂಪಾಯಿ ಖರ್ಚಾಗಿದೆ. ಇದರ ಜೊತೆಗೆ ಅವೆರಡು ಬಾಬುಗಳಲ್ಲಿ ಖರ್ಚಾಗಿರುವುದನ್ನೂ ಸೇರಿಸಬೇಕು. ಆದುದರಿಂದ ಇನ್ನೂ ಹೆಚ್ಚು ಮಾಡಿ ಎನ್ನುವುದರಲ್ಲಿ ನನ್ನದು ಅಡ್ಡಿ ಇಲ್ಲ. ಆದರೆ ಏನೂ ನಡೆದಿಲ್ಲ ಎನ್ನುವಷ್ಟು ದೂರ ಹೋಗಬಾರದು ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ರಾಜ್ಯದ ಬೇರೆ ಬೇರೆ ಭಾಗಗಳಿಗಾಗಿ ಬಜೆಟ್ಟಿನಲ್ಲಿ ಸೇರಿಸಿರತಕ್ಕ ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ ಒದಗಿಸಿರತಕ್ಕ ಹಣವನ್ನೆಲ್ಲ ಕಟ್ ಮಾಡಿ ಬರಗಾಲ ಪ್ರದೇಶಕ್ಕೆ ಖರ್ಚು ಮಾಡುತ್ತಿದ್ದಾರೆ ಎನ್ನುವ ದೊಡ್ಡ ಅಪಾದನೆ ಇದೆ. ಈ ಹೊತ್ತು ಬರಗಾಲ ಪ್ರದೇಶಕ್ಕೆ ಖರ್ಚು ಮಾಡತಕ್ಕ ಹಣ ಕೇಂದ್ರದಿಂದ ಬರಬೇಕಾಗಿರುವುದರಿಂದ ಈಗ ಹಾಕಿರುವ ನಿರ್ಬಂಧಗಳನ್ನು ಕೂಡಲೇ ತೆಗೆಯುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ವಿಷಯ ನಾನು ಒಪ್ಪಿಕೊಳ್ಳುತ್ತೇನೆ. ಬ್ಯಾನ್ ಆರ್ಡರ್ ಏನು ಮಾಡಿತ್ತು ಅದರ ದೆಸೆಯಿಂದ ಸರಿಯಾದ ತಿಳುವಳಿಕೆ ಕೆಳಮಟ್ಟದವರಿಗೆ ಹೋಗದೆ ಅನೇಕ ತೊಂದರೆಗಳಾಗಿವೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಈ ಹೊತ್ತು ಸ್ಪಷ್ಟಪಡಿಸುತ್ತೇನೆ, ಯಾವ ವಿಧವಾದ ಬ್ಯಾನ್ ಎಲ್ಲಿದ್ದರೂ ಕೂಡ ತೆಗೆದು ಹಾಕುತ್ತೇನೆ. ಲೆಟರ್ ಆಫ್ ಕ್ರೆಡಿಟ್ ವಿಷಯದಲ್ಲಿಯೂ ಕೂಡ ತೊಂದರೆಗಳಾಗುತ್ತಿವೆ ಎನ್ನುವುದನ್ನು ನನ್ನ ಗಮನಕ್ಕೆ ಬಂದಿದೆ. ಮೂರು ತಿಂಗಳು ಇಲ್ಲವೇ ಆರು ತಿಂಗಳವರೆಗೆ ಸ್ವಲ್ಪ ಫೈನಾನ್ಷಿಯಲ್ ಡಿಸಿಪ್ಲಿನ್ ಇರಬೇಕು ಎನ್ನುವ ಉದ್ದೇಶವೇ ಹೊರತು ಮತ್ತೆ ಬೇರೆ ಇಲ್ಲ. ಆ ಬಗ್ಗೆ ಜನಹಿತಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇನೆಂದು ಮಾತ್ರ ಭರವಸೆ ಕೊಡುತ್ತೇನೆ.

(ಶ್ರೀ ಎಚ್. ಎಂ. ಚನ್ನಬಸಪ್ಪ)

ಹಳೇ ಮೈಸೂರು ಭಾಗದಲ್ಲಿ ಕೆಲಸಕಾರ್ಯಗಳು ಹೆಚ್ಚಾಗಿ ಆಗಿಲ್ಲ ಎನ್ನತಕ್ಕದ್ದು ಒಂದು ಭಾವನೆ ಇರುವುದರಲ್ಲೇ ಕೆಲವು ಕಡೆ ಸತ್ಯವಿರಬಹುದು, ಕೆಲವು ಕಡೆ ಸತ್ಯವಿಲ್ಲದೆ ಇರಬಹುದು, ಕೆಲವು ಕಡೆ ಸರಿಯಾಗಿ ನಡೆದಿಲ್ಲ ಎನ್ನುವುದು ನನ್ನ ಮನಸ್ಸಿಗೆ ಬಂದಿದೆ. ಈ ಬಗ್ಗೆ ಕೂಡ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆಂದು ಸ್ಪಷ್ಟವಾಗಿ ತಮಗೆ ಹೇಳುತ್ತಿದ್ದೇನೆ.

ರೂರಲ್ ಕಮ್ಯೂನಿಕೇಷನ್ ವಿಷಯದಲ್ಲಿ ಇಂಟೆಗ್ರೇಟೆಡ್ ಪ್ರೋಗ್ರಾಂ ಏನು ಮಾಡಿವೆ ಅದಕ್ಕೆ ಈಗಾಗಲೇ 106 ಲಕ್ಷ ರೂಪಾಯಿ ಖರ್ಚಾಗಿದೆ. ಈ ವರ್ಷವೇ ಅದನ್ನು ಪ್ರಾರಂಭ ಮಾಡಿದ್ದರಿಂದ ಸ್ವಲ್ಪ ನಿಧಾನವಾಗಿ ಫುಲ್ ಸ್ಪೀಡಿನಲ್ಲಿ ಹೋಗುವುದಕ್ಕೆ ಕೆಲವು ಅಡ್ಡಿ ಆತಂಕಗಳು ಬರುವುದು ಸ್ವಾಭಾವಿಕ. ಇನ್ನೂ ಎರಡು ವರ್ಷಗಳ ಅವಧಿ ಇದೆ. ಅಷ್ಟರೊಳಗೆ ಏನು ವಾಗ್ದಾನ ನಿಮಗೆ ಕೊಟ್ಟಿದ್ದೇನೆ ಅದನ್ನು ಪೂರೈಸುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇನೆಂದು ಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ.

ಇದರ ಜೊತೆಗೆ ಅನೇಕ ಕಡೆಗಳಿಂದ ದೂರುಗಳು ಬಂದಿವೆ. ಮಲೆನಾಡಿಗೂ ಮೈದಾನಕ್ಕೂ ಒಂದು ಮೈಲಿ ರಸ್ತೆಗೆ ಇಷ್ಟು ಖರ್ಚು ಮಾಡಬೇಕು ಎಂದು ಗೊತ್ತು ಮಾಡಿರುವ ಮಿತಿಯಲ್ಲಿ ಸ್ವಲ್ಪ ವ್ಯತ್ಯಾಸ ಮಾಡಬೇಕು ಎಂದು ಹೇಳಿದ್ದಾರೆ. ಮಲೆನಾಡಿನಲ್ಲಿ ಸೇತುವೆಗಳು ಆಗಬೇಕು, ಮೋರಿಗಳಾಗಬೇಕು, ಮಳೆ ಬಂದರೆ ರಸ್ತೆ ಕೊಚ್ಚಿಕೊಂಡು ಹೋಗುತ್ತದೆ. ಇಂಥ ತೊಂದರೆಗಳಿವೆ. ರಸ್ತೆಗಳಿಗೆ ಮಣ್ಣು ಹಾಕಿದ್ದೇವೆ. ಇವಾದ ನಂತರ ಜೆಲ್ಲಿ ಹಾಕಿ, ಟಾರ್ ಹಾಕುವುದು ಈ ಕೆಲಸಗಳನ್ನು ಮಾಡಬೇಕಾಗುತ್ತದೆ. ಮೊದಲು ರಸ್ತೆ ಮಾಡುವಾಗ ಮಣ್ಣು ಹಾಕಲೇ ಬೇಕು. ಅದನ್ನು ಹಾಕದೆ ವಿಧಿ ಇಲ್ಲ. ಆದುದರಿಂದ ಮಲೆನಾಡಿಗೂ ಮೈದಾನಕ್ಕೂ ವ್ಯತ್ಯಾಸವಿದೆ ಎನ್ನುವುದು ನನ್ನ ಮನಸ್ಸಿಗೆ ಬಂದಿದೆ. ಆದುದರಿಂದ ಮಲೆನಾಡು ಪ್ರದೇಶಕ್ಕೆ ಅತ್ಯಾವಶ್ಯಕವಾಗಿ ಹೆಚ್ಚಿನ ಖರ್ಚನ್ನು ಒಂದೊಂದು ಮೈಲಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಹದಿನೇಳು ಸಾವಿರ ಕಿಲೋಮೀಟರ್ ರಸ್ತೆ ತಗೆದುಕೊಂಡಿದ್ದೇವೆ. ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಈ ಪ್ರಶ್ನೆ ಬಂತು. ಇನ್ನು ಐದು ವರ್ಷದೊಳಗಾಗಿ, ಮುಂದಿನ ಪಂಚವಾರ್ಷಿಕ ಯೋಜನೆಯ ಅವಧಿಯೊಳಗಾಗಿ ಇಡೀ ದೇಶದಲ್ಲಿ ಎಲ್ಲ ಹಳ್ಳಿಗಳಿಗೂ ರಸ್ತೆ ಆಗಬೇಕೆಂದು ಪ್ರತಿಪಾದನೆ ಮಾಡಿದ ಕಾಲದಲ್ಲಿ ಎಲ ರಾಜ್ಯಗಳೂ ಒಪ್ಪಿ ಇದಕ್ಕೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿ ಕಳುಹಿಸಿಕೊಡಬೇಕು, ಅದಕೆ ತಗಲತಕ್ಕ ಖರ್ಚಿನಲ್ಲಿ 50 ಪರ್ಸೆಂಟ್ ಕೇಂದ್ರ ಸರ್ಕಾರ ಕೊಡಬೇಕು ಎನ್ನುವ ಸೂಚನೆಯನ್ನು ಕೊಟ್ಟಾಗ ಇದಕ್ಕೆ ಸರ್ವಾನುಮತದ ಬೆಂಬಲ ದೊರೆಯಿತು. ಮೊನ್ನೆ ಕೇಂದ್ರ ಸರ್ಕಾರದ ಮಂತ್ರಿಗಳು ಬಂದಾಗಲೂ ಕೂಡ ಅವರ ಸಂಗಡ ಪ್ರಸ್ತಾಪ ಮಾಡಿದಾಗ 'ಗೋ ಅಹೆಡ್' ಎಂದು ಅವರೂ ಕ್ಲಿಯರೆನ್ಸ್ ಕೊಟ್ಟಿದ್ದಾರೆ. ಆದುದರಿಂದ ಈ ಮಾಸ್ಟರ್ ಪ್ಲಾನ್ ತಯಾರು ಮಾಡುವುದಕ್ಕೆ ಪ್ರಯತ್ನ ಮಾಡಿ ರೂರಲ್ ಕಮ್ಯೂನಿಕೇಷನ್ ರೋಡ್ಸ್ ಎಲ್ಲ ಹಳ್ಳಿಗಳಿಗೂ ಆಗುವಂಥ ಕಾರ್ಯವನ್ನು ಮಾಡುತ್ತೇವೆ.

ಇನ್ನು ಪಿ ಡಬ್ಲ್ಯು.ಡಿ. ರಸ್ತೆಗಳ ವಿಷಯದಲ್ಲಿ ರಸ್ತೆಗಳು ಸಮರ್ಪಕವಾಗಿಲ್ಲ ಬಹಳ ಕೆಟ್ಟು ಹೋಗಿವೆ ಎಂದು ಎಲ್ಲ ಕಡೆಗಳಿಂದಲೂ ದೂರುಗಳು ಬರುತ್ತಿವೆ. ಇದಕ್ಕೆ ಕಾರಣವೇನು ಎನ್ನುವುದನ್ನು ಮೂಲಭೂತವಾಗಿ ಇದರ ಸಂಶೋಧನೆ ಮಾಡಬೇಕಾಗಿ ಬಂತು. ಇದನ್ನು ಮಾಡಿದ ಮೇಲೆ ಇದರಲ್ಲಿ ಕೆಲವಂಶಗಳು ಹೊರಬಿದ್ದಿವೆ. 1962ರಲ್ಲಿ ಏನು ರಸ್ತೆಯ ಒಂದು ಪ್ರಮಾಣವಿತ್ತು ಅದೇ ಪ್ರಮಾಣದಲ್ಲಿ ಇಂದು ಎಂದರೆ 1972ನೇ ಇಸವಿಯಲ್ಲಿ ಇಲ್ಲ ಎನ್ನುವುದನ್ನು ನಾನೂ ಒಪ್ಪಿಕೊಳ್ಳುತ್ತೇನೆ, ಕಾರಣ 1962ರಲ್ಲಿ 34,429 ಕಿಲೋಮೀಟರುಗಳಷ್ಟು ಪಿ.ಡಬ್ಲ್ಯು.ಡಿ. ರೋಡುಗಳಿದ್ದದ್ದು 1972ರಲ್ಲಿ 50,484 ಕಿಲೋಮೀಟರುಗಳಷ್ಟು ಆಗಿದೆ ಎಂದರೆ ಮೂರನೇ ಒಂದು ಭಾಗದಷ್ಟು ರಸ್ತೆಗಳು ಹೆಚ್ಚಾಗಿವೆ. ಇದರ ಮೇಂಟೆನೆನ್ಸ್ ಇತ್ಯಾದಿ ಖರ್ಚುಗಳಿಗಾಗಿ 62ರಲ್ಲಿ 12.17 ಲಕ್ಷ ಆಗುತ್ತಿತ್ತು. ಈಗ ಎಂದರೆ 1972ರಲ್ಲಿ ಇದರ ಖರ್ಚು 14.70 ಲಕ್ಷದಷ್ಟು ಹೆಚ್ಚಾಗಿದೆ. ಹೀಗೆ ಇದನ್ನು ಸರಿಯಾಗಿ ಹೋಲಿಕೆ ಮಾಡಿ ನೋಡುವಾಗ ಇದರಲ್ಲಿ ಹೆಚ್ಚು ಖರ್ಚು ಆಗುತ್ತಿರುವುದು ಕಂಡು ಬರುತ್ತದೆ. ಇವೊತ್ತು ಒಂದಕ್ಕೆ ಒಂದೂವರೆಯಷ್ಟು ಲೇಬರು ಕಾಸ್ಟು ಹೆಚ್ಚಾಗುತ್ತಿವೆ, ಮೆಟೀರಿಯಲ್ಸ್ ಕಾಸ್ಟು ಕೂಡ ಒಂದಕ್ಕೆ ಒಂದೂವರೆಯಷ್ಟು ಹೆಚ್ಚಾಗುತ್ತಿದೆ. ಹೀಗೆ ಇಂದು ಇರುವ ಪ್ರಮಾಣದ ರಸ್ತೆಯನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕಾದರೆ ನಮಗೆ ಇನ್ನೂ ಸುಮಾರು 23-24 ಕೋಟಿಯಷ್ಟು ಹಣ ಬರೀ ರಸ್ತೆಗಳಿಗಾಗಿಯೇ ಬೇಕಾಗುತ್ತದೆ. ಇದನ್ನು ಪ್ರೊವೈಡು ಮಾಡಬೇಕಾಗಿದೆ. ಬಡ್ಜೆಟ್ಟಿನಲ್ಲಿ ಇದಕ್ಕಾಗಿ ಪ್ರೊವೈಡು ಮಾಡಿರುವುದು 14 ಕೋಟಿ

ಯಷ್ಟು ಒದಗಿಸಿರುವುದು, ಇದರಲ್ಲಿ 50 ಸಾವಿರ ಕಿಲೋಮೀಟರಿನಷ್ಟು ರಸ್ತೆಗಳ ರಿಪೇರಿಗಾಗಿಯೇ ಖರ್ಚಾಗುತ್ತದೆ, ಇಷ್ಟು ಹಣ ಒದಗಿಸದೇ ಇದ್ದರೆ ರಿಪೇರಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ ಹಿಂದೆ 1962ನೇ ಇಸವಿಯಲ್ಲಿ ಯಾವ ರೀತಿ ಮೇಂಟೇನ್ ಮಾಡುತ್ತಿದ್ದೆವೋ ಅದೇ ರೀತಿ ಇಂದು ರಸ್ತೆಗಳನ್ನು ಮೇನ್‌ಟೇನು ಮಾಡಲಾಗುವುದಿಲ್ಲ. ಈಗಿರುವ ರಸ್ತೆಗಳನ್ನು ಪೂರ್ಣವಾಗಿ ದುರಸ್ತು ಮಾಡಿ ಇಟ್ಟುಕೊಳ್ಳಬೇಕಾದರೆ ಸುಮಾರು 22-23 ಕೋಟಿಯಷ್ಟು ಹಣ ಬೇಕಾಗುತ್ತದೆ, ಇಲ್ಲದೇ ಇದ್ದರೆ ಎಲ್ಲ ರಸ್ತೆಗಳನ್ನೂ ಮೇನ್‌ಟೇನ್ ಮಾಡುವುದು ಕಷ್ಟವಾಗುತ್ತದೆ, ನಾವು ಈಗ ಮೇನ್‌ಟೆನೆನ್ಸ್ ಮಾಡುವುದಕ್ಕೋಸ್ಕರ ಬಡ್ಜೆಟ್ಟಿನಲ್ಲಿ ನಾವು ಒದಗಿಸಿರುವುದು ಆರು ಕೋಟಿ ರೂಪಾಯಿಗಳು, ಇದರಲ್ಲೇನಾಗಿದೆ ಎಂದರೆ ಒಂದು ಕೋಟಿ ರೂಪಾಯಿಗಳಷ್ಟು ಮೈಲ್ ಕೂಲಿ ಕೆಲಸ ಮಾಡುವ ಜನಗಳಿಗಾಗಿ ಇವರ ಸಂಬಳಕ್ಕೆ ಖರ್ಚಾಗುತ್ತಿದೆ. ನಮ್ಮಲ್ಲಿ ಸುಮಾರು ಹತ್ತು ಸಾವಿರ ಜನ ಮೈಲಿ ಕೂಲಿ ಜನಗಳು ಇದ್ದಾರೆ, ಪ್ರತಿ ಐದು ಕಿಲೋಮೀಟರಿಗೆ ಒಬ್ಬರು ಮೈಲಿ ಕೂಲಿ ಎಂದು ಇದ್ದಾರೆ. ಇವರು ಯಾವ ರೀತಿ ಕೆಲಸ ಮಾಡುತ್ತಾರೋ ಭಗವಂತನೇ ಬಲ್ಲ. ಹೀಗೆ ಸಂಬಳಕ್ಕೆ ಹಣ ಒಂದು ಕೋಟಿ ರೂಪಾಯಿಗಳಷ್ಟು ಕೊಟ್ಟ ಮೇಲೆ ಬಾಕಿ ಉಳಿಯುವುದು ಐದು ಕೋಟಿ ರೂಪಾಯಿ ಐವತ್ತು ಸಾವಿರ ಕಿಲೋ ಮೀಟರುಗಳಷ್ಟು ಇರುವ ರಸ್ತೆಯನ್ನು ಐದು ಕೋಟಿ ರೂಪಾಯಿಗಳಲ್ಲಿ ಖರ್ಚು ಮಾಡಿ ಮಾಡಬೇಕೆಂದರೆ ಇದು ದುಸ್ಸಾಧ್ಯವಾದ ಕೆಲಸ. It becomes practically impossible.

ಈ ಪ್ರಶ್ನೆಯನ್ನು ನಾವು ಹಾಗೂ ನೀವು ಎಲ್ಲರೂ ಸೇರಿ ಉಭಯತ್ರರೂ ಎದುರಿಸಬೇಕಾಗಿದೆ. ಇದರಲ್ಲಿ ಬರೀ ಸರಕಾರದ ಪ್ರಶ್ನೆಯೇ ಇಲ್ಲ. ನಾವು ಅಧಿಕಾರದಲ್ಲಿದ್ದರೂ, ನಿಮ್ಮಲ್ಲಿ ಅರಿಕೆ ಮಾಡುವುದು ಇನ್ನು ಮುಂದೆ ಅನ್‌ಪ್ರೊಡಕ್ಟೀವ್ ವರ್ಕ್ಸ್‌ಗಳು ಎಂದು ಯಾವುದು ಇವೆ ಅವನ್ನು ನಿಲ್ಲಿಸಿ ಎಂದು ತಾವು ಹೇಳಬೇಕು, ಯಾವುದು ಅತ್ಯಗತ್ಯವಾಗಿ ಆಗಲೇಬೇಕಾಗಿವೆಯೋ ಅಂತಹ ಕೆಲಸಗಳನ್ನು ಮೊದಲು ಮಾಡಿ, ಬಾಕಿ ಇತರ ಕೆಲಸಗಳನ್ನು ನಿಲ್ಲಿಸಿ ಎಂದು ಇಲ್ಲಿ ಹೇಳುತ್ತೇನೆ. ನಾನು ಒಂದು ಸಾರಿ ಚಿಕ್ಕಮಗಳೂರು ಜಿಲ್ಲೆಗೆ ಹೋದಾಗ ಅಲ್ಲಿನ ತಾಲ್ಲೂಕು ಆಫೀಸು ಕಟ್ಟಡವಾಗಿಲ್ಲ ಎಂದರು. ರಸ್ತೆ, ಸೇತುವೆ ಇಂತಹ ಆವಶ್ಯಕವಾದ ನಿಮ್ಮ ಭಾಗದ ಕೆಲಸಗಳನ್ನು ನಿಲ್ಲಿಸಿ ತಾಲ್ಲೂಕು ಆಫೀಸು ಕಟ್ಟಡ ಮೊದಲು ಮಾಡುವುದು ಬೇಡ. ಸೇತುವೆ ಕೆಲಸಗಳನ್ನು ಮುಂಚೆ ಮಾಡಿ ಆನಂತರ ಅದನ್ನು ಮಾಡಬಹುದು ಎಂದು ಸಲಹೆ ಮಾಡಿದೆ. ಹೀಗೆ ಇದರ ಬಗ್ಗೆ ಎಲ್ಲವನೂ ಅನಲೈಸು ಮಾಡಿ ಇದರ ಒಂದು ಚಿತ್ರವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಎರಡನೇದು ಇದರಲ್ಲಿ ಇನ್ನೊಂದು ವಿಚಾರ ಏನಾಗಿದೆ ಎಂದರೆ ಹಿಂದೆ ಹತ್ತಾರು ಮೈಲಿಗಳ ಕೆಲಸವನ್ನು ಮಾಡುವಾಗ ಇಷ್ಟು ವೆಚ್ಚ ಬರುತ್ತಿರಲಿಲ್ಲ. ನಾನಾಗಲೇ ಹೇಳಿದಂತೆ ಒಂದು ಕೋಟಿಯಷ್ಟು ರೂಪಾಯಿ ಕೂಲಿ ಮಾಡುವ ಜನಕ್ಕೆ ಸಂಬಳ ಕೊಡಬೇಕಾದರೆ ನಮ್ಮಲ್ಲಿ ನಾನೂರು ಮೈಲಿ ರಸ್ತೆ ಇದೆ.

ಶ್ರೀ ಎ. ಜಿ. ಕೊಡಗಿ.—ನಗರ ಪ್ರದೇಶಗಳಲ್ಲಿ ಗಗನಸೌಧಗಳನ್ನು ಕಟ್ಟಬೇಕೆಂದು ಮಾಡುತ್ತಿದ್ದೀರಿ. ಹಳ್ಳಿಗಾಡಿನ ಜನರ ಕೆಲಸಗಳನ್ನು ಮಾಡಬೇಕೆಂದರೆ ಇದಕ್ಕೆ ಖರ್ಚು ಹೆಚ್ಚಾಗುತ್ತದೆ ಎಂದು ಹೇಳಿದರೆ ಹೇಗೆ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ರಸ್ತೆಗಳು ಹೇಗಿವೆ ಎನ್ನುವುದನ್ನು ಮುಂದೆ ನಾನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇನ್ನು ಮುಂದೆ ನಮ್ಮ ಮಾನ್ಯ ಮಂತ್ರಿಗಳಿಗೆ ಬರೀ ಪಿ.ಡಬ್ಲ್ಯು.ಡಿ. ರಸ್ತೆಗಳನ್ನು ಕೊಟ್ಟು ಇರಿಗೇಷನ್ ಖಾತೆಯನ್ನು ಇವರಿಂದ ತೆಗೆದು ಬಿಡುವುದು ಸರಿಯಲ್ಲವೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಆದುದರಿಂದ ಇವನ್ನೆಲ್ಲಾ ಸರಕಾರ ಸರಿಯಾಗಿ ಪರಿಶೀಲನೆ ಮಾಡಿ ಇದನ್ನು ಹೇಗೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇದರ ಜೊತೆಗೆ ನಮಗೆ ಇನ್ನಷ್ಟು ರಸ್ತೆಗಳನ್ನು ಸೇರಿಸಬೇಕೆಂದು ಪಟ್ಟಿಗಳೂ ಬರುತ್ತಿವೆ. ನಮಗೆ ಇರುವ ರಸ್ತೆಗಳಿಗೇ ದುಡ್ಡು ಸಾಲದೆ ಇದನ್ನು ಸರಿ ಮಾಡಲಾಗುತ್ತಿಲ್ಲ. ಇರುವ ರಸ್ತೆಗಳನ್ನು ಯೋಗ್ಯ ರೀತಿಯಲ್ಲಿ ಮೇನ್‌ಟೇನ್ ಮಾಡಬೇಕು ಇದರಲ್ಲಿ ನಿಮಗೆ ಹಾಗೂ ನಮಗೆ ಎಲ್ಲರಿಗೂ ಅನುಕೂಲವಾಗುವಂತೆ ಮಾಡಬೇಕಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಸ್ವಾಮೀ, ಆಯಾ ಸಾಲಿನಲ್ಲಿ ತೆಗೆದುಕೊಂಡ ಕಾಮಗಾರಿಗಳನ್ನು ಆಯಾ ಸಾಲಿನಲ್ಲೇ ಪೂರ್ತಿ ಮಾಡಬೇಕೆಂದು ಮಾಡಿ ಅದಕ್ಕೆ ಕೊಟ್ಟ ಹಣ ಪೂರ್ತಿಯಾಗಿ ಉಪಯೋಗ ಮಾಡಬೇಕು ಎಂದು ಕಟ್ಟುನಿಟ್ಟಾದ ಸೂಚನೆಗಳನ್ನು ಅಧಿಕಾರಿಗಳಿಗೆ ಕೊಟ್ಟರೆ ಸರಿಹೋಗುತ್ತದೆ. ಇದರ ಬಗ್ಗೆ ತಾವೇನು ಹೇಳುತ್ತೀರಿ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಇನ್ನೊಂದು ಮಹತ್ವದ ವಿಷಯ ರಸ್ತೆಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ರಸ್ತೆಗಳನ್ನು ಮಾಡುವಾಗ ಯಾವ ರೀತಿ ಅವಶ್ಯಕತೆ ಇದೆಯೋ ಅದೇ ರೀತಿ ಇದರ ಮೇನ್‌ಟೆನೆನ್ಸ್ ಕೂಡ ಬಹಳ ಅವಶ್ಯಕ. ಸಾವಿರಗಟ್ಟಲೆ ರಸ್ತೆಗಳನ್ನು ತೆಗೆದುಕೊಳ್ಳಬಹುದು, ಇದನ್ನು ಆಯಾ ಭಾಗದಲ್ಲಿರುವ ಪಂಚಾಯತಿಯವರು ಪಂಚಾಯತಿ ರಸ್ತೆಗಳನ್ನು ಸರಿಯಾಗಿ ನೋಡಿಕೊಳ್ಳಬೇಕು, ತಾಲ್ಲೂಕು ಬೋರ್ಡುಗಳಿಗೆ ವಹಿಸಿರುವ ರಸ್ತೆಗಳನ್ನು ತಾಲ್ಲೂಕ್ ಬೋರ್ಡಿನವರು ನೋಡಿಕೊಳ್ಳಬೇಕು ಮತ್ತು ಇದರ ವ್ಯವಸ್ಥೆಗಳನ್ನು ಮುನಿಸಿಪಲ್ ಸಂಸ್ಥೆಗಳಿಗೆ ವಹಿಸಿದ್ದರೆ ಅವರು ಇದರ ವ್ಯವಸ್ಥೆ ಸರಿಯಾಗಿ ನೋಡಿಕೊಳ್ಳಬೇಕು. ಇದಕ್ಕಾಗಿ ನಮ್ಮ ರಾಜ್ಯದಲ್ಲಿರುವ ರಸ್ತೆಗಳನ್ನು ಯಾವ ರೀತಿ ಮಾಡಬೇಕು ಎನ್ನುವುದನ್ನು ಕೂಲಂಕಷವಾಗಿ ವಿಚಾರ ಮಾಡಲು ಒಂದು ಕಮಿಟಿಯನ್ನು ಸದ್ಯದಲ್ಲೇ ಮಾಡಬೇಕೆಂದು ಇದ್ದೇನೆ. ಈ ಸಭೆಯ ಸದಸ್ಯರನ್ನೂ ಇದರಲ್ಲಿ ನೇಮಕ ಮಾಡಬೇಕೆಂದು ಇದೆ. ಈಗ ನಾವು ಬಜೆಟ್ಟಿನಲ್ಲಿ ಒದಗಿಸಿರುವಂತೆ ಒಂದೂವರೆ ಕೋಟಿ ರೂಪಾಯಿಗಳಷ್ಟು ಹಣ ಬಹಳ ಕಡಿಮೆ, ಇದನ್ನು ಇನ್ನು ಯಾವ ತರಹದಲ್ಲೂ ಕಡಿಮೆ ಮಾಡಲು ಸಾಧ್ಯವಿಲ್ಲ. ಸುಮಾರು ಐವತ್ತು ಸಾವಿರ ಕಿಲೋಮೀಟರು ಉದ್ದ ರಸ್ತೆಗಳನ್ನು ನಾವು ಮೇನ್‌ಟೇನ್ ಮಾಡಬೇಕಾದರೆ ಇವಕ್ಕೆ ಸುಮಾರು 60 ಕೋಟಿಯಷ್ಟು ಹಣ ಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ನಾವು ಎಷ್ಟು ದುಡ್ಡು ಒದಗಿಸಿದರೂ ಸ್ಪಿಲ್ ಓವರ್ ವರ್ಕ್ ಎಂದು ಮಾಡುವುದನ್ನು ಕಡಿಮೆ ಮಾಡಿದರೆ ಇಲಾಖೆಗೆ ಒಳ್ಳೆಯ ಹೆಸರು ಬರುತ್ತದೆ ಇಲ್ಲದೇ ಇದ್ದರೆ ಇದು ಸರಿಯಾಗುವುದಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಒಳ್ಳೆಯ ಹೆಸರು ನಿಮಗೂ ಹಾಗೂ ನಮಗೂ ಬೇಕು, ಕೆಲವು ಕಡೆ ರಸ್ತೆಗಳನ್ನು ಕಮ್ಮಿ ಮಾಡಬಹುದು, ಕೆಲವು ಕಡೆ ಜಾಸ್ತಿ ಮಾಡಬಹುದು, ಕೆಲವು ಕಡೆ ಅಗತ್ಯವಾದ ರಸ್ತೆಗಳನ್ನು ಮಾಡಲೇ ಬೇಕಾಗುತ್ತದೆ.

ಇನ್ನು ನ್ಯಾಷನಲ್ ಹೈವೇ ರೋಡುಗಳನ್ನು ನಮ್ಮ ರಾಜ್ಯದಲ್ಲಿ ಮೇಂಟೇನ್ ಮಾಡಲು ಕೇಂದ್ರ ಸರಕಾರ ರಾಜ್ಯ ಸರಕಾರಕ್ಕೂ ಸೂಚನೆಗಳನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಏಳನೇ ಒಂದು ಭಾಗದಷ್ಟು ಕೇಂದ್ರ ಸಹಾಯ ಮಾಡುತ್ತಿದೆ. ಇನ್ನೂ ಅನೇಕ ರಸ್ತೆಗಳನ್ನೂ ರಾಜ್ಯ ಸರಕಾರ ತೆಗೆದು ಕೊಳ್ಳಬೇಕೆಂದು ಕೇಂದ್ರದವರು ಬರೆದಿದ್ದಾರೆ. ನಮಗೆ ಇಷ್ಟು ಹಣ ಖರ್ಚು ಮಾಡಲು ಸಾಧ್ಯವಿಲ್ಲ ಎನ್ನುವುದು ತಮಗೂ ಗೊತ್ತಿದೆ.

ಮತ್ತೊಂದು ಮುಖ್ಯವಾದ ವಿಷಯವೆಂದರೆ, ಈ ನ್ಯಾಷನಲ್ ಹೈವೇ, ಸ್ಟೇಟ್ ಹೈವೇ ಮತ್ತು ಒ.ಡಿ.ಆರ್., ಎಂ.ಡಿ.ಆರ್. ರಸ್ತೆಗಳು ಯಾವ ಯಾವ ಮುನಿಸಿಪಾಲಿಟಿಗಳು ಮತ್ತು ಪಂಚಾಯಿತಿಗಳ ಮೇಲೆ ಹಾದು ಹೋಗುತ್ತವೋ, ಆ ಮುನಿಸಿಪಾಲಿಟಿಯವರು ಮತ್ತು ಪಂಚಾಯಿತಿಯವರು ಅವನ್ನು ಮೇನ್‌ಟೇನ್ ಮಾಡಬೇಕೆಂಬ ನಿಯಮವಿತ್ತು. ಆದರೆ ಮುನಿಸಿಪಾಲಿಟಿಗಳವರ ಹತ್ತಿರ ಮತ್ತು ಪಂಚಾಯಿತಿಯವರ ಹತ್ತಿರ ಸಾಕಷ್ಟು ಹಣ ಇಲ್ಲದಿರುವುದರಿಂದ ಇನ್ನು ಮುಂದೆ ಈ ಎಲ್ಲ ಮಾರ್ಗಗಳನ್ನು ಸಹ ಲೋಕೋಪಯೋಗಿ ಇಲಾಖೆಯವರೇ ಮೇನ್‌ಟೇನ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರಂತೆ ಆಜ್ಞೆಯನ್ನು ಸಹ ಮಾಡಿದ್ದೇವೆ. ಈ ವಿಚಾರದಲ್ಲಿ ವಿಶೇಷವಾದ ಕಾನೂನಿನ ಬದಲಾವಣೆ ಆಗಬೇಕಾಗಿದ್ದರೆ ಅದನ್ನು ಸಹ ಜಾಗ್ರತೆ ಮಾಡುತ್ತೇವೆ.

ಶ್ರೀ ಬಿ. ಇ. ರಾಮಯ್ಯ.—ಉದಕಮಂಡಲ ಹಾಗೂ ಹುಮ್ನಾಬಾದ್‌ಗಳಿಗೆ ಸಂಪರ್ಕ ಕಲ್ಪಿಸುವ ರಾಜ್ಯದ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಬೇಕೆಂದು ಈ ಸಭೆಯಲ್ಲಿ ಒಂದು ಖಾಸಗೀ ನಿರ್ಣಯವನ್ನು ತರಲಾಗಿತ್ತು. ಆ ವಿಷಯದಲ್ಲಿ ಸರ್ಕಾರದವರು ಏನು ನಿಲುವು ತೆಗೆದುಕೊಂಡಿದ್ದಾರೆ ? ಏಕೆಂದರೆ ಈ ರಸ್ತೆ 8 ಜಿಲ್ಲೆಗಳ ಮೇಲೆ ಹಾದು ಹೋಗುತ್ತದೆ.

Sri H. M. CHANNABASAPPA.—We have recommended such important roads which are essential, to be taken up as National High ways. It is a matter left to the Government of India. At what distance of time the decision will be taken I do not know.

ಇನ್ನು ಈ ಸೇತುವೆಗಳ ಬಗ್ಗೆ ಕೂಡ ಒಂದು ಕಾರ್ಪೊರೇಷನನ್ನು ಮಾಡಿ ಆ ಮೂಲಕ ಸೇತುವೆಗಳನ್ನು ಕಟ್ಟಿಸುವುದಕ್ಕೆ ಸೂಕ್ತವಾದ ವ್ಯವಸ್ಥೆ ಮಾಡುತ್ತೇವೆ. ಈ ಬಗ್ಗೆ ತಾವೂ ಸಹ ಸಲಹೆಗಳನ್ನು ಕೊಟ್ಟಿದ್ದೀರಿ ಮತ್ತು ನಮ್ಮ ಅಧಿಕಾರಿಗಳು ಸಹ ಸಲಹೆ ಕೊಟ್ಟಿದ್ದಾರೆ. ಈ ಸೇತುವೆಗಳನ್ನು ಕಟ್ಟಿಸಲು 25 ರಿಂದ 30 ಕೋಟಿ ರೂಪಾಯಿಗಳ ಖರ್ಚು ಬರುತ್ತದೆ. ಆದಕಾರಣ ಇನ್ನು ಮುಂದೆ ಈ ಸೇತುವೆಗಳನ್ನು ಕಟ್ಟಿಸಿದ ಮೇಲೆ ಅವಕ್ಕೆ ಟೋಲ್‌ಗೇಟ್ ಇಟ್ಟು ಸುಂಕವನ್ನು ವಸೂಲಿ ಮಾಡುವ

ದರ ಮೂಲಕ ಬರುವ ವರಮಾನದಿಂದ ಅದಕ್ಕಾಗಿ ಮಾಡುವ ಸಾಲವನ್ನು ತೀರಿಸಬೇಕೆಂದಿದ್ದೇವೆ. ಈ ಕಾರಣದಿಂದ ಯಾವ ರೀತಿಯಿಂದ ಸಾಲ ಎತ್ತಬೇಕು ಎನ್ನುವುದರ ಬಗ್ಗೆ ಒಂದು ನಿರ್ದಿಷ್ಟವಾದಂಥ ಸಲಹೆಗಳನ್ನು ಕೊಡುವುದಕ್ಕಾಗಿ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ತಕ್ಷಣದಲ್ಲಿಯೇ ಮಾಡಿ ಅವರ ಸಲಹೆಗಳನ್ನು ತೆಗೆದುಕೊಂಡು ಮುಂದಿನ ಕಾರ್ಯಕ್ರಮವನ್ನು ಜರುಗಿಸಲಾಗುತ್ತದೆಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ:—ಇನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದ್ನು 15 ದಿವಸಗಳಲ್ಲಿ ಮಾಡುತೇವೆ. ಅವರು ಒಂದು ತಿಂಗಳಿನಲ್ಲಿ ರಿಪೋರ್ಟ್ ಕೊಡಬೇಕಾಗುತ್ತದೆ. ಅವರು ರಿಪೋರ್ಟ್ ಕೊಟ್ಟನಂತರ ಕೆಲಸ ಮಾಡಿಸಲಾಗುತ್ತದೆ. ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಅವರಿಗೆ ಈ ಕೆಲಸವನ್ನು ವಹಿಸಬೇಕೆಂದಿದ್ದೇವೆ.

ಶ್ರೀ ಬಿ. ಇ. ರಾಮಯ್ಯ.—ರೈಲ್ವೇ ವಿಷಯವನ್ನು ತಾವು ಹೇಳಲಿಲ್ಲ ?

Sri H. M. CHANNABASAPPA.—We have made a recommendation to the Government of India as to what are all the Railways that are to be taken by them.

ಶ್ರೀ ಬಿ. ಇ. ರಾಮಯ್ಯ.—ಯಾವ ಯಾವ ರೈಲ್ವೇ ಮಾರ್ಗಗಳನ್ನು ರೆಕಮೆಂಡ್ ಮಾಡಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಹೇಳಿದ್ದೇನೆ. ನಾನು ಹೇಳಿದಾಗ ತಾವು ಸಭೆಯಲ್ಲಿ ಇಲ್ಲದಿದ್ದರೆ ಏನು ಮಾಡುವುದು ? ನಾವು ಮುಖ್ಯವಾಗಿ ಇರಿಗೇಷನ್‌ಗೆ ಮೊದಲ ಪ್ರಾಶಸ್ತ್ಯ ಕೊಡಬೇಕೆಂದಿದ್ದೇವೆ. ಎರಡನೇ ಪ್ರೈಯಾರಿಟಿ ಲಿಫ್ಟ್ ಇರಿಗೇಷನ್, ಮೂರನೇ ಪ್ರೈಯಾರಿಟಿ ಎಲೆಕ್ಟ್ರಿಸಿಟಿ, ನಾಲ್ಕನೇ ಪ್ರೈಯಾರಿಟಿ ಕಟ್ಟಡಗಳು ಮತ್ತು ರಸ್ತೆಗಳು. ಈ ರೀತಿಯಲ್ಲಿ ನಾವು ಒಂದು ಪ್ಲಾನ್ ಇಟ್ಟುಕೊಂಡು ಕೆಲಸ ಮಾಡಿದರೆ ಒಳ್ಳೆಯದಾಗುತ್ತದೆ. ತಮ್ಮಲ್ಲಿ ನಾನು ಅರಿಕೆ ಮಾಡಿಕೊಳ್ಳುವುದು ಏನೆಂದರೆ, ಈಗ ನಮ್ಮಲ್ಲಿ ಸರ್‌ಫೇಸ್ ವಾಟರ್ ಎಗ್‌ಜಾಸ್ಟ್ ಆಗಿದೆ. ಕೆರೆಗಳ ನಿರ್ಮಾಣದ ಕೆಲಸವು ಬಹಳಷ್ಟು ಮುಗಿದುಹೋಗಿದೆ. ಎಲ್ಲೋ ಅಲ್ಲೊಂದು ಇಲ್ಲೊಂದು ಉಳಿದುಕೊಂಡು ಇರಬಹುದು. ಈಗ ಸರ್‌ಫೇಸ್ ವಾಟರ್ ಎಗ್‌ಸಾಸ್ಟ್ ಆಗಿರುವುದರಿಂದ ಭೂಮಿಯೊಳಗಿರುವ ನೀರನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳಬಹುದು ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಇದರ ಜೊತೆಗೆ ಈಗ ನಾವು ಉಪಯೋಗ ಮಾಡುತ್ತಿರುವ ನೀರಿನ ಉಪಯೋಗ ಪನಿದೆ ಅದರ ಮೆಥೆಡನ್ನು ಬದಲಾವಣೆ ಮಾಡದೇ ಹೋದರೆ ನೀರನ್ನು ಸದುಪಯೋಗ ಮಾಡುವುದಕ್ಕಾಗುವುದಿಲ್ಲ. ಇದರ ಜೊತೆಗೆ ಕ್ರಾಪ್ ಪ್ಯಾಟರನನ್ನು ಬದಲಾವಣೆ ಮಾಡಬೇಕಾಗುತ್ತದೆ. ಡ್ಯೂಟಿ ಹೆಚ್ಚಿಸಬೇಕಾಗುತ್ತದೆ. ಇದರ ಜೊತೆಗೆ ಇನ್ನು ಮುಂದೆ ಸ್ಪ್ರಿಂಕ್ಲರ್ ಇರಿಗೇಷನನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ವಿಧಾನವನ್ನು ಜಾರಿಗೆ ತಂದರೆ ಈಗ ಒಂದು ಎಕರೆಗೆ ಉಪಯೋಗ ಮಾಡುವ ನೀರನ್ನು ಮೂರು ಎಕರೆಗೆ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಈಗಿರುವ ನೀರನ್ನು ನಾವು ಆರ್ಥಿಕವಾಗಿ ಬಹಳ ಅನುಕೂಲವಾಗುವಂತೆ ಉಪಯೋಗ ಮಾಡಿಕೊಳ್ಳಬೇಕಾದರೆ ಇವೆಲ್ಲಾ ಮಾರ್ಗಗಳನ್ನು ಹೊಸ ಹೊಸದಾಗಿ ಕಂಡುಹಿಡಿದು ಜಾರಿಗೆ ತರಬೇಕಾಗುತ್ತದೆ. ಈ ವಿಷಯವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಪ್ಲಾನ್ ಕನ್‌ಸ್ಟ್ರಕ್ಷನ್ ಲಿಮಿಟೇಷನ್ ಆಗುತ್ತಾ ಬರುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮೈನರ್ ಇರಿಗೇಷನ್ ಬಗ್ಗೆ ಒಂದು ಮಾಸ್ಟರ್ ಪ್ಲಾನನ್ನು ರೋಡ್ಸ್ ಬಗ್ಗೆ ಇರುವಂತೆ ಏತಕ್ಕೆ ತಯಾರಿಸಬಾರದು ?

ಶ್ರೀ ಎಚ್. ಡಿ. ದೇವೇಗೌಡ.—ಹಿಂದೆ ಆಲೂರು ಹನುಮಂತಪ್ಪನವರ ಕಾಲದಲ್ಲಿ ಮಾಡಿಸಲಾಗಿತ್ತು. ಈಗ ಅದು ಏನಾಗಿದೆಯೋ ಗೊತ್ತಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರ ಬಗ್ಗೆ ಬರುತ್ತಿದ್ದೇನೆ. ಈಗ ಏನಾಗಿದೆಯೆಂದರೆ ಮಾನ್ಯ ಸದಸ್ಯರು ಪಟ್ಟಿಗಳನ್ನು ಕೊಡುತ್ತಾರೆ. ಅದರಲ್ಲಿ 8–10 ಹೆಸರುಗಳನ್ನು ಕೊಟ್ಟಿರುತ್ತಾರೆ. ಯಾವುದನ್ನು ಮೊದಲು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಅದರಲ್ಲಿ ಪ್ರೈಯಾರಿಟಿಯನ್ನು ತೋರಿಸಿರುವುದಿಲ್ಲ. ಆದರೂ ಇರಿಗೇಷನ್‌ಗೆ ಫಸ್ಟ್ ಪ್ರೈಯಾರಿಟಿ ಕೊಡಬೇಕೆಂಬುದೇ ಸರ್ಕಾರದ ಆಶಯಾಗಿದೆ. ಈಗ ಹೊಸ ಕೆರೆಗಳನ್ನು ಕಟ್ಟಿಸುವುದು ಇರಲಿ, ಇರತಕ್ಕಂಥ ಕೆರೆಗಳನ್ನು ಮತ್ತು ನಾಲೆಗಳನ್ನು ಒಳ್ಳೆಯ ವ್ಯವಸ್ಥಿತ ರೀತಿಯಲ್ಲಿಟ್ಟು ನೋಡಿಕೊಂಡು ಹೋಗುವುದು ಬಹಳ ಅವಶ್ಯಕವಿದೆ. ಅದಕ್ಕಾಗಿ ಎಲ್ಲ ಕೆರೆಗಳ ತೂಬು, ಕೋಡಿ, ಮೋರಿಯ ರಿಪೇರಿ ಕೆಲಸವನ್ನು ತುರ್ತಾಗಿ ಮಾಡಿಸಬೇಕೆಂದು ಈಗಾಗಲೇ ಆಜ್ಞೆ ಕೊಟ್ಟಿದ್ದೇವೆ. ಅದೇ ರೀತಿ ಚಾನಲ್‌ಗಳ ರಿಪೇರಿ ಕೆಲಸವನ್ನು ಜೂನ್ ತಿಂಗಳೊಳಗೆ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಮಾಡಿಸಬೇಕೆಂದು ಹೇಳಿದ್ದೇವೆ. ಈ ಬಗ್ಗೆ ಯಾರಾದರು ಅಧಿಕಾರಿಗಳು ಕಾರ್ಯಲೋಪ ಮಾಡಿದರೆ ಅವರ ಕರ್ತವ್ಯದಲ್ಲಿ ಲೋಪ ಎಂದು ಸರ್ಕಾರ ಪರಿಗಣಿಸುತ್ತದೆಂದು ಸ್ಪಷ್ಟವಾಗಿ ಹೇಳಲಾಗಿದೆ. ಆದಕಾರಣ ಈ ಬಗ್ಗೆ ಯಾರಾದರೂ ಅಧಿಕಾರಿಗಳು ಕರ್ತವ್ಯಲೋಪ ಮಾಡಿ ರೈತರಿಗೆ ತೊಂದರೆಯನ್ನು ಉಂಟುಮಾಡಿದರೆ ಅದನ್ನು ಮಾನ್ಯ ಸದಸ್ಯರು ನನಗೆ ತಿಳಿಸಿದರೆ ನಾನು ಸೂಕ್ತ ಕ್ರಮವನ್ನು ಅವರ ಬಗ್ಗೆ ತೆಗೆದುಕೊಳ್ಳುತ್ತೇನೆ. ಈ ಬಗ್ಗೆ ಇನ್ನೇನಾದರು ಆಗಬೇಕಾದರೆ ಅದನ್ನು ಮಾನ್ಯ ಸದಸ್ಯರು ನನಗೆ ತಿಳಿಸಬಹುದು. ಇಂದು ಅನೇಕ ಕೆರೆಗಳನ್ನು ನೋಡಿಕೊಳ್ಳಲು ಸೌಡಿಗಳು ಇಲ್ಲದೆ ತೊಂದರೆಯಾಗಿದೆ ಎಂದು ತಿಳಿದುಬಂದಿದೆ. ಈ ಬಗ್ಗೆ ಸಹ ಒಂದು ಆರ್ಡರನ್ನು ಹೊರಡಿಸಿ ಕೊನೆಯಪಕ್ಷ 500 ಎಕರೆಗೆ ಒಬ್ಬ ಸೌಡಿಯಾದರೂ ಇರಬೇಕೆಂದು ತೀರ್ಮಾನ ಮಾಡಿ ಅವರಂತೆ ನೇಮಕ ಮಾಡಬೇಕೆಂದಿದ್ದೇವೆ. ಇನ್ನು ಒಂದು ತಿಂಗಳು ಅಥವಾ ಒಂದೂವರೆ ತಿಂಗಳುಗಳಲ್ಲಿ ಈ ಕೆಲಸಕಾರ್ಯಗಳು ಜಾರಿಗೆ ಬರುವಂತೆ ಮಾಡುತ್ತೇವೆ. ಕೆರೆಗಳ ವಿಷಯ ಹೇಳುವಾಗ ಈಗ ಹಾಲಿ ಇರತಕ್ಕಂಥ ನಮ್ಮ ಪ್ಲಾನ್ ಸ್ಕೀಮ್‌ನಲ್ಲಿ, ಮತ್ತು ನಾನ್-ಪ್ಲಾನ್ ಸ್ಕೀಮ್‌ನಲ್ಲಿ ಡಿ.ಪಿ.ಎ.ಪಿ.ನಲ್ಲಿ 64 ಫ್ಯಾಮಿನ್‌ನಲ್ಲ, 10 ಕೋಟಿ 45 ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡತಕ್ಕಂಥ ಕ್ಯಾಪಾಸಿಟಿ ಇದೆ. ಈಗ ಹಾಲಿ ಪ್ರೋಗ್ರೆಸ್‌ನಲ್ಲಿರತಕ್ಕಂಥ ಕೆಲಸಗಳು 348 ಇವುಗಳ ವೆಚ್ಚ 24 ಕೋಟಿ ರೂಪಾಯಿಗಳು. ನಾವು ಕೈಕೊಂಡ ಕೆಲಸಗಳನ್ನು ಮುಗಿಸಿದಂತೆ ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಈಗಿನ ಸ್ಟೆಂಡಿಂಗ್ ಕ್ಯಾಪಾಸಿಟಿಯನ್ನು ಲೆಕ್ಕ ಹಾಕುವುದಾದರೆ ನಾವು ಇನ್ನೂ 3-4ರಷ್ಟು ಹೆಚ್ಚಿಗೆ ಕೆಲಸಗಳನ್ನು ಸ್ಯಾಂಕ್ಷನ್ ಮಾಡಬೇಕಾಗಿ ಬರುತ್ತದೆ. 30 ರಿಂದ 40 ಕೋಟಿ ರೂಪಾಯಿಗಳವರೆಗೆ ಸ್ಯಾಂಕ್ಷನ್ ಮಾಡುವುದಕ್ಕೆ ಅವಕಾಶವಿದೆ. ಈಗ ಸ್ಯಾಂಕ್ಷನ್ ಮಾಡಿರುವುದು 24 ಕೋಟಿ ರೂಪಾಯಿಗಳು ಆಗಿರುವುದರಿಂದ ಇನ್ನೂ ಹತ್ತು ಕೋಟಿ ರೂಪಾಯಿ ವೆಚ್ಚದಲ್ಲಿ ಹೊಸ ಮೈನರ್ ಇರಿಗೇಷನ್ ಕೆಲಸಗಳನ್ನು ಸ್ಯಾಂಕ್ಷನ್ ಮಾಡುವುದಕ್ಕೆ ಅವಕಾಶವಿದೆ. ತಮಗೆ ತಿಳಿಸುವುದಕ್ಕೋಸ್ಕರ ಈ ಅಂಕಿ ಅಂಶಗಳನ್ನು ಕೊಟ್ಟೆ. ಹಳೆಯ ಮೈಸೂರು ಭಾಗದಲ್ಲಿ ಹೊಸದಾಗಿ ಕೆರೆಗಳ ಕೆಲಸಗಳನ್ನು ತಗೆದುಕೊಂಡಿಲ್ಲ ಎಂದು ಕೆಲವರು ಹೇಳಿದರು. ಇದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

11-00 A. M.

ಈಗ ನಮ್ಮಲ್ಲಿ ರೆಡಿಯಾಗಿ 950 ಕೆರೆಗಳ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಯೋಜನೆಗಳು ಸಿದ್ಧವಾಗಿವೆ. ಅವು ಟೆಕ್ನಿಕಲಿ ಫೀಜಿಬಲ್ ಆಗಿವೆ. ಆ ಎಲ್ಲಾ ಕೆರೆಗಳ ಕೆಲಸವನ್ನೂ ತೆಗೆದುಕೊಳ್ಳಬೇಕಾದರೆ ಸುಮಾರು 10-14 ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆ. ಡಿಸ್ಟ್ರಿಕ್ಟ್‌ವಾರು ಅವುಗಳ ಫಿಗರ್ಸ್ ಬೇಕಾದರೆ ತಮಗೆ ಕೊಡುತ್ತೇನೆ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ 54 ಕೆರೆಗಳ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಯೋಗ್ಯವಾಗಿದೆಯೆಂದು ಲಿಸ್ಟ್ ಬಂದಿದೆ. ತುಮಕೂರು 35 ಕೆರೆಗಳು, ಕೋಲಾರ 69 ಕೆರೆಗಳು, ಮೈಸೂರು 15 ಕೆರೆಗಳು, ಮಂಡ್ಯ 11 ಕೆರೆಗಳು, ಶಿವಮೊಗ್ಗ 105 ಕೆರೆಗಳು, ಚಿಕ್ಕಮಗಳೂರು, 39 ಕೆರೆಗಳು, ಹಾಸನ 111 ಕೆರೆಗಳು, ಸೌತ್‌ಕೆನರಾ 107 ಕೆರೆಗಳು, ಬೀದರ್ 340 ಕೆರೆಗಳು, ಈ ರೀತಿಯಾಗಿ ಒಟ್ಟು 950 ಕೆರೆಗಳ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಯೋಜನೆಗಳು ಸಿದ್ಧವಾಗಿವೆ. ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಹಳೆಯ ಮೈಸೂರಿನಲ್ಲಿ ಏನೂ ಕೆಲಸ ಆಗಿಲ್ಲ ಎಂದು ಶ್ರೀಮಾನ್ ಪುಟ್ಟಸ್ವಾಮಯ್ಯನವರು ಏನು ಹೇಳಿದರು ಅದು ಸರಿಯುಲ್ಲ. ಹಳೆಯ ಮೈಸೂರಿನಲ್ಲಿ ಮೈನರ್ ಇರಿಗೇಷನ್ ಸಂಬಂಧದಲ್ಲಿ ಏನೇನು ಕೆಲಸಗಳನ್ನು ತೆಗೆದುಕೊಂಡಿದ್ದೇವೆ ಎಂಬುದನ್ನು ಅವರು ನನ್ನ ಜೊತೆಯಲ್ಲಿ ಒಂದು ಸಾರಿ ಬಂದು ನೋಡಬೇಕು. ಆಗ ಅವರು ಅದನ್ನು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ.

ಇನ್ನು ಲಿಫ್ಟ್ ಇರಿಗೇಷನ್ ವಿಚಾರ. ಎಲ್ಲ ನದಿಗಳಲ್ಲಿ ಬೇಸಿಗೆಯಲ್ಲಿ ನೀರು ಇರುವುದಿಲ್ಲ ಅಂಥಾ ಕಡೆ ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳಬೇಕಾದರೆ ಜೀವನದಿಗಳಾದರೆ ಸಾಧ್ಯವೇ ವಿನಾ ಬೇಸಿಗೆಯಲ್ಲಿ ಒಣಗಿ ಹೋಗಿ ಮಳೆಗಾಲದಲ್ಲಿ ನೀರು ಹರಿಯತಕ್ಕ ನದಿಗಳಲ್ಲಿ ಲಿಫ್ಟ್ ಇರಿಗೇಷನ್ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಒಂದು ಎಕರೆಗೆ 750 ರೂಪಾಯಿಗಳನ್ನು ಫಿಕ್ಸ್ ಮಾಡಿದರೂ ಪರವಾಯಿಲ್ಲ ಲಿಫ್ಟ್ ಇರಿಗೇಷನ್ ಮುಖಾಂತರ ನೀರು ಕೊಡಿ ಎಂದು ಹೇಳಿದ್ದಾರೆ. ಈಗ ಇರತಕ್ಕ ಲಿಫ್ಟ್ ಇರಿಗೇಷನ್ ಸ್ಕೀಮಿನಲ್ಲಿ ರೈತನಿಗೆ ಜಮೀನಿಗೆ ನೀರನ್ನು ಒದಗಿಸಿದರೆ ಅವನು ಒಂದು ಎಕರೆಗೆ 350 ರೂಪಾಯಿ

ಗಳ ನೀರು ತೆರಿಗೆಯನ್ನು ಕೊಡಬೇಕಾಗುತ್ತದೆ. ನೀರು ಕೊಡುವುದು ಸುಲಭ. ಆದರೆ ರೈತರಿಂದ ಹಣ ವಸೂಲು ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಅದು ಈಗಿರತಕ್ಕ ಆಕ್ಟ್ ಪ್ರಕಾರ ಸಾಧ್ಯವಾಗುವುದಿಲ್ಲ. ಆದ್ದರಿಂದ ಹೊಸ ತಿದ್ದುಪಡಿ ಆಕ್ಟನ್ನು ತರಬೇಕಾಗುತ್ತದೆ. ಈ ದೃಷ್ಟಿಯಿಂದ ವಾಟರ್ ರೇಟನ್ನು ಯಾವರೀತಿ ಫಿಕ್ಸ್ ಮಾಡಬೇಕು, ಎನ್ನುವುದನ್ನು ಗೊತ್ತು ಮಾಡುವ ಹಾಗೂ ಅದರ ತಾಂತ್ರಿಕ ಜವಾಬ್ದಾರಿ ಮತ್ತು ಸಿಬ್ಬಂದಿ ವ್ಯವಸ್ಥೆ ಯಾವರೀತಿ ಇರಬೇಕು ಎನ್ನತಕ್ಕ ಎಲ್ಲಾ ವಿಷಯಗಳನ್ನೂ ಪರಿಶೀಲನೆ ಮಾಡಿ ತಕ್ಷಣ ಸೂಕ್ತ ತಿದ್ದುಪಡಿ ಮಾಡುವುದಕ್ಕೆ ಸಮರ್ಪಕವಾದ ಸಲಹೆಗಳನ್ನು ನೀಡಬಲ್ಲ ಸಮಿತಿಯೊಂದನ್ನು ರಚನೆ ಮಾಡಿ, ಆ ಸಮಿತಿಯವರ ಸಲಹೆಯನ್ನು ಪಡೆದು ವಾಟರ್ ರೇಟ್ ವಸೂಲಿ ಶಾಸನಕ್ಕೆ ತಿದ್ದುಪಡಿಯನ್ನು ಈ ಸಭೆಯ ಮುಂದೆ ತರುತ್ತೇವೆ. ಈ ಲಿಫ್ಟ್ ಇರಿಗೇಷನ್ ಸ್ಕೀಮಿಗೆ ಇದುವರೆಗೆ 136 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ತಿದ್ದುಪಡಿ ಶಾಸನ ಬಂದಮೇಲೆ ಈ ಯೋಜನೆಗೆ 80 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದಿದ್ದೇವೆ.

ಸರ್ಕಾರದವರು ಇನ್ನೊಂದು ಹೊಸ ಯೋಜನೆಯನ್ನು ಮಾಡಬೇಕೆಂದಿದ್ದಾರೆ. ಅದು ಏನೆಂದರೆ ಹೊಸದಾಗಿ 100 ಎಕರೆ, 200 ಎಕರೆ ಲಿಫ್ಟ್ ಇರಿಗೇಷನ್ ಯೋಜನೆ ಮಾಡುವುದು ಒಂದು. ಇದರ ಜೊತೆಗೆ ಎಲ್ಲಾ ಕೆರೆಗಳಲ್ಲೂ 12 ತಿಂಗಳು ನೀರು ಇರುವಂತೆ ಒಂದು ಹೊಸ ಯೋಜನೆಯನ್ನು ಕೈಗೊಳ್ಳಬೇಕೆಂದಿದ್ದೇವೆ. ಈ ಬಗ್ಗೆ ಚೀಫ್ ಇಂಜನಿಯರಿಗೆ ಆದೇಶವನ್ನು ನೀಡಲಾಗುವುದು.

ಇನ್ನು ರೈಲ್ವೆ ವಿಷಯವಾಗಿ ಮಾನ್ಯ ಸದಸ್ಯರು ಕೆಲವರು ಪ್ರಸ್ತಾಪ ಮಾಡಿದ್ದಾರೆ. ಮತ್ತು ಈ ಬಗ್ಗೆ ಕೇಂದ್ರಕ್ಕೆ ಯಾವ ರೀತಿ ಸಿಫಾರಸ್ಸು ಮಾಡಿದ್ದೀರಿ ಎಂದು ಕೇಳಿದರು. ಅದು ಈ ರೀತಿ ಇದೆ. ಕನ್‌ವರ್ಷನ್ ಆಫ್ ಬ್ರಾಡ್‌ಗೇಜ್ ರೈಲ್ವೆ ಲೈನ್, ಬೆಂಗಳೂರು-ಮೈಸೂರು, ಮಿರಜ್-ಹುಬ್ಬಳ್ಳಿ, ಷೋಲಾಪುರ-ಹುಬ್ಬಳ್ಳಿ. ಕನ್‌ಸ್ಟ್ರಕ್ಷನ್ ಆಫ್‌ಹುಬ್ಬಳ್ಳಿ-ಕಾರವಾರ ಲೈನ್, ಕೊಟ್ಟೂರು ಹರಿಹರ-ಚಾಮರಾಜನಗರ-ಸತ್ಯಮಂಗಲ, ರಾಯದುರ್ಗ-ಚಿತ್ರದುರ್ಗ, ತಾಳಗುಪ್ಪ-ಹೊನ್ನಾವರ ಬ್ರಾಡ್‌ಗೇಜ್ ಲೈನ್ ಬಳ್ಳಾರಿ-ಗುಲ್ಬರ್ಗ, ಮಿರಜ್-ಗುಲ್ಬರ್ಗ ಲೈನ್ ವಯಾ ಬಿಜಾಪುರ ಅಂಡ್ ಸಿಂಡಗಿ. ಇಷ್ಟು ಲೈನುಗಳನ್ನು ಸಿಫಾರಸ್ಸು ಮಾಡಿ ಕೇಂದ್ರಕ್ಕೆ ಕಳುಹಿಸಿದ್ದೇವೆ.

ಇನ್ನು ಪೋರ್ಟುಗಳ ವಿಷಯ. ಇದರಲ್ಲಿ ಜಲಮಾರ್ಗಗಳು ಮತ್ತು ಸಣ್ಣ ಬಂದರುಗಳು ಇವುಗಳ ಬಗ್ಗೆ ಹೆಚ್ಚು ಆದ್ಯತೆಯನ್ನು ಇನ್ನು ಮುಂದೆ ಕೊಡಬೇಕೆಂದು ಸರ್ಕಾರದ ಯೋಚನೆ ಇದೆ. ಈಗಾಗಲೇ ಕಾರವಾರ ಬಂದರನ್ನು ಸ್ವಲ್ಪ ಉತ್ತಮಪಡಿಸಬೇಕು ಎಂದು ಅದಕ್ಕಾಗಿ 5.3 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ವಾಟರ್‌ವೇಸ್‌ಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಈ ತೊಂದರೆಗಳನ್ನು ನಿವಾರಣೆಮಾಡುವುದಕ್ಕೋಸ್ಕರ ಜಾಯಿಂಟ್ ಸೆಕ್ಟರಿನಲ್ಲಿ ಒಂದು ಶಿಪ್ಪಿಂಗ್ ಕಾರ್ಪೊರೇಷನ್ ಮಾಡಬೇಕೆಂದು ಸರ್ಕಾರ ಯೋಚನೆ ಮಾಡುತ್ತಿದೆ. ಮತ್ತು ಪೋರ್ಟ್ಸ್ ಅಂಡ್ ವಾಟರ್‌ವೇಸ್ ಬಗ್ಗೆ ಸಹ ಒಂದು ಅಟಾನಮಸ್ ಅಥಾರಿಟಿ ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ. ಇದನ್ನು ಮಾಡಿ ನಮ್ಮ ರಾಜ್ಯದಲ್ಲಿ 19 ಬಂದರುಗಳು ಇವೆ, ಅವುಗಳಲ್ಲಿ ಉತ್ತಮವಾದವುಗಳನ್ನು ಇನ್ನೂ ಉತ್ತಮಗೊಳಿಸಲು ಹೆಚ್ಚು ಪ್ರಾಧಾನ್ಯತೆ ಕೊಟ್ಟು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಬೇಕೆಂದು ಇದೆ. Madam Speaker, I have taken more time than scheduled. Well, I could not help it, because of interruptions.

Sri C. M. ARUMUGHAM.—Madam Speaker, I would like to ask him one clarification. Last time when we raised the matter about Sharavathi Power Tunnel, he said that he would go and inspect and make a statement. He also said there must be some enquiry—judicial enquiry or whatever that might be. He is silent on that matter. May I request him kindly to say what he wants to say about it?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಟನಲ್ ವಿಷಯ, ಮತ್ತು ನಾಶೆಯ ವಿಷಯದ ಬಗ್ಗೆ ಕೇಂದ್ರ ಸರ್ಕಾರದ ಒಂದು ಹೈ ಪವರ್ ಕಮಿಟಿ ಮಾಡಿ ಅವರು ರಿಪೋರ್ಟು ಕೊಟ್ಟನಂತರ ಅದನ್ನು ಈ ಸಭೆಯ ಮುಂದೆ ಇಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಕಾರ್ಪರೇಷನ್‌ನಲ್ಲಿ ಹತ್ತಾರು ಜನ ಇಂಜಿನಿಯರುಗಳನ್ನು ಸಸ್ಪೆಂಡ್ ಮಾಡಿ, ಆ ಮೇಲೆ ಸರ್ಕಾರದಲ್ಲಿ ಪ್ರಭಾವ ಬೀರತಕ್ಕಂತಹ ಮತ್ತು ಲಂಚ ಕೊಡ ತಕ್ಕಂತಹ ಆಫೀಸರುಗಳನ್ನು ತೆಗೆದುಕೊಂಡು ಉಳಿದ ಬಡ ಎಂಪ್ಲಾಯೀಸನ್ನು ಇನ್ನೂ ವರ್ಷ ಗಟ್ಟಲೆ ಸಸ್‌ಪೆನ್‌ಷನ್ನಿನಲ್ಲಿ ಇಟ್ಟಿರುವುದಕ್ಕೆ ಏನು ಕಾರಣ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಸ್‌ಪೆನ್‌ಷನ್ನಿನಲ್ಲಿ ಇಟ್ಟವರನ್ನು ಪುನಃ ತೆಗೆದುಕೊಂಡದ್ದು ಅದರ ಬಗ್ಗೆ ಅವಶ್ಯವಾದ ಕಾಗದ ಪತ್ರಗಳು ಸಿಕ್ಕಿದ ಮೇಲೆ ಸಸ್‌ಪೆನ್‌ಶನ್ನಿನಲ್ಲಿ ಇಡುವುದು ಯೋಗ್ಯವಲ್ಲವೆಂದು ಕಂಡುಬಂದುದರಿಂದ ಹಾಗೆ ಮಾಡಲಾಗಿದೆ. ತಾವು ಯಾವುದೇ ಕೇಸ್ ಮೇಲೆ ಪ್ರಸ್ತಾಪ ಮಾಡಿದರೆ ಅದರ ಬಗ್ಗೆ ಏನಾದರೂ ಅನ್ಯಾಯ ಇದ್ದರೆ, ಅದನ್ನು ಯೋಚನೆ ಮಾಡೋಣ. ತಾವು ಖುದ್ದಾಗಿ ಬಂದು ಅದನ್ನು ಹೇಳಿದರೆ ನೋಡಬಹುದು.

MADAM SPEAKER.—The question is :

"That respective sums not exceeding the amounts inclusive of the sum mentioned in the list of Demands be granted to the Government to defray the charges which will come in course of payment during the financial year ending 31st day of March 1974, in respect of Demand Nos. 6, 29. 30, 31, 31A, 30B, 32, 46, 47, 48, 50 and 50A."

(The motion was adopted and the Demands were voted.)

As ordered by the Chair, the motion for Demands for Grants adopted by the House are re-produced below :—

" That a sum not exceeding Rs, 24,20,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March, 1974, in respect of Demand No. 6 'Other Taxes and Duties Administration.'"

" That a sum not exceeding Rs. 20,25,17,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. '29 'Irrigation (Commercial).' "

"That a sum not exceeding Rs. 4,86,55,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 30 'Irrigation (Non-Commercial).' "

" That a sum not exceeding Rs. 1, 81, 00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 30 B 'Capital Outlay on Irrigation, etc., within the Revenue Account.'."

" That a sum not exceeding Rs. 48,64,93,000 inclusive of the sum granted 'on account' be granted to the Government

to defray the charges which will come in course of payment during the financial year ending 31st day of March 1974, in respect of Demand No. 31 'Public Works.' "

" That a sum not exceeding Rs. 4,26,31,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974 in respect of Demand No. 31-A 'Capital Outlay on Public Works (within the Revenue Account).'."

" That a sum not exceeding Rs. 23 02,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. '32 (Ports and Pilotage.' "

" That a sum not exceeding Rs. 96,00,000, inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 46 'Capital Outlay on Irrigation, etc. (Non-Commercial).' "

"That a sum not exceeding Rs. 28,39,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 47 'Capital Outlay on Electricity Schemes.' "

" That a sum not exceeding Rs. 9,11,83,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in resepect of Demand No. 48 'Capital Outlay on Public Works.' "

" That a sum not exceeding Rs. 30,74,000 inclusive of the sum granted 'on account' be granted to the Government to dafray the charges which will come in course of payment during the financial year ending 31st day of March 1974' in respect of Demand No. 50 'Development of Minor Ports.' "

" That a sum not exceeding Rs. 7,64,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 50—A 'Capital Outlay on Road and Water Transport Schemes.' "